10.		ನಗರದ ಇಂದಿರಾ ವೃತ್ತದಿಂದ ಎಸ್. ಎನ್. ಪೇಟೆ ರಸ್ತೆಗೆ ಹಾಲಿ 11 ಕೆ.ವಿ. ಹೆಚ್.ಟಿ. ಓವರ್‌ಹೆಡ್ ಲೈನನ್ನು ಹೆಚ್.ಟಿ. ಅಂಡರ್‌ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು.		49.63
11.		ನಗರದ 1ನೇ ರೈಲ್ವೆಗೇಟ್‌ನಿಂದ ಸುಧಾ ಕ್ರಾಸ್‌ವರೆಗೆ 11 ಕೆ.ವಿ. ಹೆಚ್.ಟಿ. ಓವರ್‌ಹೆಡ್ ಲೈನನ್ನು ಹೆಚ್.ಟಿ. ಅಂಡರ್‌ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು.		72.86
12.		ನಗರದ 1ನೇ ರೈಲ್ವೆಗೇಟ್‌ನಿಂದ ಟಿ.ಬಿ. ಆಸ್ಪತ್ರೆವರೆಗೆ ಎಲ್.ಟಿ. ಓವರ್‌ಹೆಡ್ ಲೈನನ್ನು ಎಲ್.ಟಿ. ಅಂಡರ್‌ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು.		78.80
13.		ನಗರದ 1ನೇ ರೈಲ್ವೆಗೇಟ್‌ನಿಂದ ಟಿ.ಬಿ. ಆಸ್ಪತ್ರೆವರೆಗೆ 11 ಕೆ.ವಿ. ಹೆಚ್.ಟಿ. ಓವರ್‌ಹೆಡ್ ಲೈನನ್ನು ಹೆಚ್.ಟಿ. ಅಂಡರ್‌ಗ್ರೌಂಡ್ ಕೇಬಲ್‌ಗೆ ಬದಲಾಯಿಸುವುದು.		52.53
		ಒಟ್ಟು ಸ್ಪಿಲ್ ಓವರ್ ವರ್ಕ್ಸ್ ಮೊತ್ತ	**1.78**	**978.61**

		ಹೊಸ ಕಾಮಗಾರಿಗಳು ಪ್ಯಾಕೇಜ್-1		
1.	93	ನಗರದ ದೋಬಿ ಬೀದಿ, ಕೌಲ್ ಬಜಾರ್‌ಯಿಂದ ಬಂಡಿಹಟ್ಟಿವರೆಗೆ ಅಗಲೀಕರಿಸಿ ಅಭಿವೃದ್ಧಿಪಡಿಸುವುದು	1.10	261.50
2.	93	ನಗರದ ಜವಾರಿ ಬೀದಿ, ಕೌಲ್ ಬಜಾರ್ ಮುಖ್ಯರಸ್ತೆಯಿಂದ ಬೈಪಾಸ್ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿಪಡಿಸುವುದು	0.65	189.97
3.	93	ನಗರದ ಗಡಂಗ್ ಬೀದಿ, ಕೌಲ್ ಬಜಾರ್ ಮುಖ್ಯರಸ್ತೆಯಿಂದ ಹಳೇ ಮಾರುಕಟ್ಟೆವರೆಗೆ ಅಗಲೀಕರಿಸಿ ಅಭಿವೃದ್ಧಿಪಡಿಸುವುದು	1.10	262.50
4.	93	ನಗರದ ಕ್ರಿಶ್ಚಿಯನ್ ಸ್ಮಶಾನ, ಕೌಲ್‌ಬಜಾರ್ ಮುಖ್ಯರಸ್ತೆಯಿಂದ ಬೈಪಾಸ್ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿಪಡಿಸುವುದು.	1.10	212.83
5.	93	ನಗರದ ಓ.ಪಿ.ಡಿ ರಸ್ತೆ, ಓ.ಪಿ.ಡಿ. ವೃತ್ತದಿಂದ ಕೊಳಗಲ್ ರಸ್ತೆವರೆಗೆ (ಸುಧಾಕ್ರಾಸ್) ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	0.85	742.19
6.	93	ನಗರದ ಟೈಲರ್ ಬಿದಿ 2ನೇ ಗೇಟ್ ನಿಂದ ಕೌಲ್ ಬಜಾರ್ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	0.75	149.79
7.	93	ನಗರದ ಬಂಡಿಹಟ್ಟಿ ರಸ್ತೆ ಬಳಗಲ್ ಕ್ರಾಸ್ ದಿಂದ ಬಂಟಿಹಟ್ಟಿ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	1.00	285.49
8.	93	ನಗರದ ಕೋಟೆ ಮುಖ್ಯ ರಸ್ತೆ ರಿಬ್ಲಿಕ್ ವೃತ್ತದಿಂದ ರಾ.ಹೆ. 63, ವಯಾ ಪಿ.ಡಬ್ಲ್ಯೂಡಿ. ಕಛೇರಿ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	1.30	404.73
9.	93	ನಗರದ ಇನ್‌ಫೆಂಟ್ರಿ ರಸ್ತೆಯ, ಇನ್‌ಫೆಂಟ್ರಿ ಮುಖ್ಯರಸ್ತೆಯಿಂದ ಕೌಲ್ ಬಜಾರ್ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	1.40	348.85
10.	93	ನಗರದ ದೋಡ್ಡಿ ಬೀದಿಯನ್ನು ರೇಡಿಯೊ ಪಾರ್ಕ್ ಮುಖ್ಯ ರಸ್ತೆಯಿಂದ ಕೌಲ್‌ಬಜಾರ್ ಮುಖ್ಯ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	0.55	116.98
11.	93	ನಗರದ ಮೋರ್ ಗಲ್ಲಿ ಬೀದಿಯನ್ನು ಬಂಡಿಹಟ್ಟಿ ರಸ್ತೆಯಿಂದ ದೋಬಿ ಬೀದಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	1.20	220.27
ಬಿ		**93 ಕ್ಷೇತ್ರದ ಒಟ್ಟು ಮೊತ್ತ**	**11.00**	**3195.13**
		ಹೊಸ ಕಾಮಗಾರಿಗಳು ಪ್ಯಾಕೇಜ್-2		
1.	94	ನಗರದ ಕಪ್ಪಗಲ್ ರಸ್ತೆಯನ್ನು ದುರ್ಗಮ್ಮ ವೃತ್ತದಿಂದ ಕೆನಾಲ್‌ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.50	442.36
2.	94	ನಗರದ ಇಂದಿರಾ ನಗರ ರಸ್ತೆಯನ್ನು ಫೈರ್‌ಸ್ಟೇಷನ್ ವೃತ್ತದಿಂದ ಓ.ಪಿ.ಡಿ. ಕ್ರಾಸ್‌ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	1.52	498.74
3.	94	ನಗರದ ಬಾಂಬೆಪ್ರೆಸ್ ರಸ್ತೆಯನ್ನು ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.62	179.08
4.	94	ನಗರದ ಕಾಳಮ್ಮ ಬೀದಿಯನ್ನು ವೆಟನರಿ ಆಸ್ಪತ್ರೆಯಿಂದ ಭಾರತ್ ಬಿಸ್ಕತ್ ಫ್ಯಾಕ್ಟರಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು ಚೈನೇಜ್ 775 ರಿಂದ 975 ವರೆಗೆ	0.20	78.64
5.	94	ನಗರದ ತೇರು ಬೀದಿಯನ್ನು ದೊಡ್ಡ ಮಾರುಕಟ್ಟೆಯಿಂದ ಕನೇಕಲ್ ಬಸ್ ನಿಲ್ದಾಣದವರೆಗೆ ಅಗಲೀಕರಿಸಿ ಅಭಿವೃದ್ಧಿಪಡಿಸುವುದು ಚೈನೇಜ್ 1000 ರಿಂದ 1440 ವರೆಗೆ	0.44	157.26
6.	94	ನಗರದ ಹಳೇ ಧಾರವಾಡ ರಸ್ತೆಯಲ್ಲಿ ಕುಟ್ಟಿ ಹೋಟೆಲ್‌ನಿಂದ ಫೈರ್ ಸ್ಟೇಷನ್ ವೃತ್ತದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	1.25	338.61

7.	94	ನಗರದ ಗಾಂಧಿನಗರ 1ನೇ ಕ್ರಾಸ್, ಗೋಪಾಲಸ್ವಾಮಿ ರಸ್ತೆಯಿಂದ ಸಂಗನಕಲ್ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.00	273.23
8.	94	ನಗರದ ತಾಳೂರು ರಸ್ತೆಯನ್ನು ಪಾರ್ವತಿ ನಗರ ಮುಖ್ಯರಸ್ತೆಯಿಂದ ಮಹಾನಗರಪಾಲಿಕೆ ಹದ್ದಿನವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.75	861.61
9.	94	ನಗರದ ಗಾಂಧಿನಗರ 3ನೇ ಕ್ರಾಸ್, ಗೋಪಾಲಸ್ವಾಮಿ ರಸ್ತೆಯಿಂದ ಸಂಗನಕಲ್ ರಸ್ತೆ ವಯಾ ಬಾಲಭಾರತಿವರೆಗೆ ಅಗಲೀಕರಿಸಿ ಅಭಿವೃದ್ಧಿಪಡಿಸುವುದು	0.83	216.37
10.	94	ನಗರದ ನೆಹರೂ ಕಾಲೋನಿ 1ನೇ ಕ್ರಾಸ್ ರಸ್ತೆಯನ್ನು ಸಂಗನಕಲ್ ರಸ್ತೆಯಿಂದ ಅಂತ್ಯದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	0.65	203.60
11.	94	ನಗರದ ಮುಲ್ಲಂಗಿ ಸಂಜೀವಪ್ಪ ಬೀದಿಯನ್ನು ತೇರು ಬೀದಿಯಿಂದ ರೂಪನಗುಡಿ ರಸ್ತೆವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	0.55	161.80
12.	94	ನಗರದ ಗೋಲ್ಡ್‌ಸ್ಮಿತ್ ಬೀದಿಯನ್ನು ಭಾರತ್ ಬಿಸ್ಕತ್ ಫ್ಯಾಕ್ಟರಿಯಿಂದ ಬಾಂಬೆಪ್ರೆಸ್ ರಸ್ತೆ ಕ್ರಾಸ್‌ವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	1.25	499.03
13.	94	ನಗರದ ಕಮ್ಮಿಂಗ್ ರಸ್ತೆ ರೂಪನಗುಡಿ ರಸ್ತೆಯಿಂದ ತೇರು ಬೀದಿವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.50	119.23
14.	94	ನಗರದ ಶಾಸ್ತ್ರೀ ನಗರ 1ನೇ ಕ್ರಾಸ್ ರಸ್ತೆಯನ್ನು ಎಸ್.ಪಿ. ವೃತ್ತದಿಂದ ಅಂತ್ಯದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು.	0.90	239.16
15.	94	ನಗರದ ಶಾಸ್ತ್ರೀ ನಗರ 2ನೇ ಕ್ರಾಸ್ ಅವಂಬಾವಿ ರಸ್ತೆಯಿಂದ ಅಂತ್ಯದವರೆಗೆ ಅಗಲೀಕರಿಸಿ ಅಭಿವೃದ್ಧಿ ಪಡಿಸುವುದು	0.40	106.47
ಸಿ		**94 ಕ್ಷೇತ್ರದ ಒಟ್ಟು ಮೊತ್ತ**		**4375.19**
		ಹೊಸ ಕಾಮಗಾರಿಗಳು ಪ್ಯಾಕೇಜ್-3		
1		ಸಮಾಲೋಚಕರ ಶುಲ್ಕ		256.47
ಡಿ		**ಒಟ್ಟು ಮೊತ್ತ**		**256.47**
		ಹೊಸ ಕಾಮಗಾರಿಗಳು ಪ್ಯಾಕೇಜ್-4		
1		3ನೇ ತಪಾಸಣೆ ಪಕ್ಷ ಶುಲ್ಕ		42.74
ಇ		**ಒಟ್ಟು ಮೊತ್ತ**		**42.74**
		ಇತರೆ ಕಾಮಗಾರಿಗಳು		
1		ನಗರದ ಹನುಮಾನ್ ನಗರ ಕಾಂಪೋಸ್ಟ್ ಯಾರ್ಡ್ ವರಬಸಪ್ಪ ಗುಡಿ ಹತ್ತಿರ ಮಳೆ ನೀರಿನ ಚರಂಡಿ ನಿರ್ಮಾಣ		100.00
2		ನಗರದ ಆರ್.ಟಿ.ಓ. ರಸ್ತೆ, ಕೆ.ಇ.ಬಿ. ಕಛೇರಿ ಮುಂಭಾಗದಿಂದ ಪಟೇಲ್ ಮನೆವರೆಗೆ ಮಳೆ ನೀರಿನ ಚರಂಡಿ ನಿರ್ಮಾಣ		25.00
3		ನಗರದ ಎಸ್.ಎನ್. ಪೇಟೆ ರಸ್ತೆ, ದ್ವಾರಕ ಆರ್ಮ್ಸ್ ಫ್ಯಾಕ್ಟರಿ ಹತ್ತಿರ ಮಳೆ ನೀರಿನ ಚರಂಡಿ ನಿರ್ಮಾಣ		50.00
4		ನಗರದ ಕಂಟೋನ್ಮೆಂಟ್ ಸಿದ್ದಾರ್ಥ ನಗರ ಹತ್ತಿರ ಮಳೆ ನೀರಿನ ಚರಂಡಿ ನಿರ್ಮಾಣ		25.00
5		ನಗರದ ರಾ.ಹೆ.-63 (ಹೊಸಪೇಟೆ ರಸ್ತೆ, ಬೆಂಗಳೂರು ರಸ್ತೆ ಮತ್ತು ಅನಚಿತಮರ ರಸ್ತೆ) ಬೀದಿ ದೀಪ ಮತ್ತು ವಿದ್ಯುತ್ ಲೈನ್ ಅಳವಡಿಸುವುದು.		100.00
6		ನಗರದ 20 ವಿವಿಧ ಸ್ಥಳಗಳಲ್ಲಿ ಹೈಮಾಸ್ಟ್ ಲೈಟನ್ನು ಅಳವಡಿಸುವುದು.		100.00

7		ನಗರದ ವಿವಿಧ ಸ್ಥಳಗಳಲ್ಲಿ ಟ್ರಾಫಿಕ್ ಸಿಗ್ನಲ್‌ಗಳನ್ನು ಅಳವಡಿಸುವುದು		100.00
8		ನಗರದ ವಡ್ಡರಬಂಡ ಗುಡಿ ಪ್ರದೇಶದಲ್ಲಿ ಮಳೆ ನೀರಿನ ಚರಂಡಿ ನಿರ್ಮಾಣ		50.00
9		ನಗರದ ಉದ್ಯಾನವನಗಳನ್ನು ಅಭಿವೃದ್ಧಿಪಡಿಸುವುದು		100.00
10		ನಗರದ ಹೊಸ ಲ್ಯಾಂಡ್‌ಫೀಲ್ ಸೈಟ್‌ನಲ್ಲಿ ರಸ್ತೆ ನಿರ್ಮಾಣ ಮಾಡುವುದು		100.00
11		ನಗರವನ್ನು ಸ್ವಚ್ಛಗೊಳಿಸಲು ಹೊಸ ವಾಹನಗಳನ್ನು ಖರೀದಿಸುವುದು		300.00
ಎಫ್		**ಇತರೆ ಕಾಮಗಾರಿಗಳ ಒಟ್ಟು ಮೊತ್ತ**		**1050.00**
ಎಲ್ಲಾ ಕಾಮಗಾರಿಗಳ ಒಟ್ಟು ಮೊತ್ತ (ಎ+ಬಿ+ಸಿ+ಡಿ+ಇ+ಎಫ್)				**9898.14**
ಕಂಟಿನ್‌ಜೆನ್ಸಿ				101.86
ಒಟ್ಟು ಮೊತ್ತ				**10000.00**

2. ಈ ಅನುಮೋದನೆಯನ್ನು ಈ ಕೆಳಕಂಡ ಷರತ್ತುಗಳಿಗೆ ಒಳಪಟ್ಟು ನೀಡಲಾಗಿದೆ.

1. ಈ ಅನುಮೋದನೆಯನ್ನು ಕಾಮಗಾರಿಗಳ ಪಟ್ಟಿಗೆ ಮಾತ್ರ ನೀಡಲಾದ ಅನುಮೋದನೆ ಎಂದು ಪರಿಗಣಿಸುವುದು. ಈ ಅನುಮೋದನೆಯನ್ನು ಕಾಮಗಾರಿಗಳ ಪಟ್ಟಿಗೆ ಅಥವಾ ಪಟ್ಟಿಯಲ್ಲಿನ ಯಾವುದೇ ಕಾಮಗಾರಿಗೆ ನೀಡಿರುವ ಆಡಳಿತಾತ್ಮಕ ಅನುಮೋದನೆ ಎಂದು ಪರಿಗಣಿಸುವಂತಿಲ್ಲ.
2. ಸರ್ಕಾರದ ಆದೇಶ ಸಂಖ್ಯೆ : ನಅಇ 167 ಎಸಿಬಿ 2010, ದಿನಾಂಕ 13/8/2010 ರಲ್ಲಿ ಹೇಳಲಾದ ಸೂಚನೆ/ಷರತ್ತುಗಳನ್ನು ಪಾಲಿಸುವುದು.
3. ಸರ್ಕಾರದ ಆದೇಶ ಸಂಖ್ಯೆ : ನಅಇ 54 ಎಬಿಸಿ 2010, ದಿನಾಂಕ 26/11/2010 ರಲ್ಲಿ ಹೇಳಲಾದ ಸೂಚನೆ/ಷರತ್ತುಗಳನ್ನು ಪಾಲಿಸುವುದು.
4. ಕರ್ನಾಟಕ ಪೌರನಿಗಮಗಳ ನಿಯಮಗಳು, 1977ರಲ್ಲಿ ನೀಡಲಾಗಿರುವ ಸೂಚನೆಗಳಂತೆ ಪ್ರತಿ ಕಾಮಗಾರಿಯ ಅಂದಾಜು ಪಟ್ಟಿಯನ್ನು ತಯಾರಿಸಿ ಅದಕ್ಕೆ ಸಕ್ಷಮ ಪ್ರಾಧಿಕಾರದಿಂದ ಆಡಳಿತಾತ್ಮಕ ಅನುಮೋದನೆಯನ್ನು ಟೆಂಡರ್/ಇ-ಪ್ರೊಕ್ಯೂರ್ ಮೆಂಟ್ ಪ್ರಕ್ರಿಯೆ ಪ್ರಾರಂಭಿಸುವ ಮೊದಲು ಕಡ್ಡಾಯವಾಗಿ ಪಡೆದುಕೊಳ್ಳತಕ್ಕದ್ದು.
5. ರೂಪಾಯಿ ಎರಡು ನೂರು ಲಕ್ಷ ಮೀರಿರುವ ಕಾಮಗಾರಿಯ ಅಂದಾಜು ಪಟ್ಟಿಗಳಿಗೆ ಸರ್ಕಾರದ ಹಂತದಲ್ಲಿ ಕಡ್ಡಾಯವಾಗಿ ಆಡಳಿತಾತ್ಮಕ ಅನುಮೋದನೆ ಪಡೆದುಕೊಳ್ಳುವುದು.
6. ಈ ಅನುದಾನದ ಅಡಿ ಕಾಮಗಾರಿಗಳನ್ನು ನಿರ್ವಹಿಸುವ ಸಲುವಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ಅದರಡಿ ರಚಿಸಿರುವ ನಿಯಮಗಳು ಮತ್ತು ಹೊರಡಿಸಲಾದ ಸೂಚನೆಗಳಲ್ಲಿನ ಮತ್ತು ಸರ್ಕಾರದ ಅಧಿಸೂಚನೆ ಸಂಖ್ಯೆ : ಸಿಆಸುಇ 20 ಇಜಿವಿ 2009 (4), ದಿನಾಂಕ 13/7/2009 ರಲ್ಲಿನ ಎಲ್ಲಾ ಅಂಶಗಳನ್ನು ಮತ್ತು ಕಟ್ಟುನಿಟ್ಟಾಗಿ ಪಾಲಿಸಿ ಟೆಂಡರ್ ಪ್ರಕ್ರಿಯೆಯನ್ನು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಕಡ್ಡಾಯವಾಗಿ ಕೈಗೊಳ್ಳುವುದು.

3. ಈ ಆದೇಶವನ್ನು ಸರ್ಕಾರದ ಆದೇಶ ಸಂಖ್ಯೆ : ಆಇ 1 ಟಿಎಫ್‌ಪಿ 2008, ದಿನಾಂಕ 16/5/2008ರಲ್ಲಿ ಸರ್ಕಾರದ ಕಾರ್ಯದರ್ಶಿಯವರಿಗೆ ಪ್ರದತ್ತವಾಗಿರುವ ಅಧಿಕಾರದ ಅನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಎಂ.ಆರ್. ಮಹೇಶ್ ಕುಮಾರ್
ಸರ್ಕಾರದ ಅಧೀನ ಕಾರ್ಯದರ್ಶಿ
ನಗರಾಭಿವೃದ್ಧಿ ಇಲಾಖೆ (ಮಹಾನಗರಪಾಲಿಕೆ-2)

ಪಿ.ಆರ್.295

ಕಂದಾಯ ಸಚಿವಾಲಯ

ವಿಷಯ : ಶ್ರೀ ಮಧುಸೂಧನ ಶಾಸ್ತ್ರೀ, ಚುನಾವಣಾ ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿ, ಗುಲ್ಬರ್ಗಾ, ಇವರಿಗೆ ಮೊದಲನೆಯ ವಾರ್ಷಿಕ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡುವ ಕುರಿತು.

ಓದಲಾಗಿದೆ :
1. ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ, ಇವರ ಪತ್ರ ಸಂಖ್ಯೆ:ಸಂ/ಕಂ/ಸಿಬ್ಬಂದಿ-2/240/2010-11, ದಿನಾಂಕ: 07-06-2010. ಮತ್ತು 22-10-2010.
2. ಮಹಾಲೇಖಪಾಲರು, (ಎ ಮತ್ತು ಇ) ಕರ್ನಾಟಕ, ಬೆಂಗಳೂರು, ಇವರ ಪತ್ರ ಸಂ: ಜಿಇ 1/ಆರ್ 5/ Vol-536/2010-11/971, ದಿನಾಂಕ: 09-09-2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1) ರಲ್ಲಿ ಜಿಲ್ಲಾಧಿಕಾರಿಗಳು, ಗುಲ್ಬರ್ಗಾ ಜಿಲ್ಲೆ, ಗುಲ್ಬರ್ಗಾ, ಇವರ ದಿನಾಂಕ: 07-06-2010ರ ಪತ್ರದಲ್ಲಿ ಶ್ರೀ ಮಧುಸೂಧನ ಶಾಸ್ತ್ರೀ, ಚುನಾವಣಾ ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿ, ಗುಲ್ಬರ್ಗಾ, ಇವರ ವೇತನ ಶ್ರೇಣಿಯು ರೂ. 11400-21600 ವೇತನ ಗರಿಷ್ಠ ಮಟ್ಟಕ್ಕೆ ತಲುಪಿದ್ದು, ದಿನಾಂಕ: 01-12-2009 ರಿಂದ ಮೊದಲನೆಯ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡುವ ಕುರಿತು ಸದರಿಯವರ

ವಿರುದ್ಧ ಯಾವುದೇ ಇಲಾಖಾ ವಿಚಾರಣಾ ಬಾಕಿ ಇರುವುದಿಲ್ಲ. ಆದ್ದರಿಂದ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 3 ಎಸ್‌ಆರ್‌ಪಿ 96, ದಿನಾಂಕ: 18-03-1996 ರನ್ವಯ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡಲು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮ ಸಂಖ್ಯೆ (2)ರಲ್ಲಿ ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು, ರವರು ದಿನಾಂಕ: 09-09-2010 ರ ಪತ್ರದಲ್ಲಿ ಶ್ರೀ ಮಧುಸೂಧನ ಶಾಸ್ತ್ರೀ, ಚುನಾವಣಾ ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿ, ಗುಲ್ಬರ್ಗಾ, ಇವರ ವೇತನ ಶ್ರೇಣಿ 11400-21600 ವೇತನ ಗರಿಷ್ಟ ಮಟ್ಟಕ್ಕೆ ತಲುಪಿದ್ದು, ಇವರಿಗೆ ದಿನಾಂಕ: 01-12-2009 ರಿಂದ ಮೊದಲನೆ ಸ್ಥಗಿತ ವೇತನ ಬಡ್ತಿಯನ್ನು ಪಡೆಯಲು ಅರ್ಹರಿರುವುದರಿಂದ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡುವುದರ ಬಗ್ಗೆ ತಿಳಿಸಿರುತ್ತಾರೆ. ಆದ್ದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 419 ಎಎಸ್‌ಡಿ 2010 ಬೆಂಗಳೂರು, ದಿನಾಂಕ: 06-01-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಮಧುಸೂಧನ ಶಾಸ್ತ್ರೀ, ಚುನಾವಣಾ ತಹಶೀಲ್ದಾರ್, ಜಿಲ್ಲಾಧಿಕಾರಿಗಳ ಕಛೇರಿ, ಗುಲ್ಬರ್ಗಾ, ಇವರು ದಿನಾಂಕ: 01-12-2008ಕ್ಕೆ ವೇತನ ಶ್ರೇಣಿ 11400-21600 ವೇತನ ಗರಿಷ್ಟ ಮಟ್ಟಕ್ಕೆ ತಲುಪಿದ್ದು, ಶ್ರೀಯುತರಿಗೆ 01-12-2009 ರಿಂದ ಮೊದಲನೇ ಸ್ಥಗಿತ ವೇತನ ಬಡ್ತಿಯನ್ನು ಮಂಜೂರು ಮಾಡಿ ಸರ್ಕಾರವು ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಬಿ. ಸಸಾಲಟ್ಟಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು-3)

ಪಿ.ಆರ್. 308

ಕಂದಾಯ ಸಚಿವಾಲಯ

ವಿಷಯ : ಶ್ರೀ ಎಂ.ಡಿ. ಶಾಮೀದ್, ದ್ವಿತೀಯ ದರ್ಜೆ ಸಹಾಯಕರು, ತಾಲ್ಲೂಕು ಕಛೇರಿ, ಗಂಗಾವತಿ ತಾಲ್ಲೂಕು ಕೊಪ್ಪಳ ಜಿಲ್ಲೆ ಇವರು ಎಸಗಿದ ಭ್ರಷ್ಟಾಚಾರ ಆರೋಪದ ಕುರಿತು ಇಲಾಖಾ ವಿಚಾರಣೆ ಬಗ್ಗೆ.

ಓದಲಾಗಿದೆ :

1. ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು ಇವರ ಅ.ಸ.ಪ.ಸಂ.ಕಾಂಪ್ಟ್/ ಉಪಲೋಕ್/ ಜಿಎಲ್‌ಬಿ.625/2003/ಪಿಪಿ, ದಿನಾಂಕ: 16-09-2005.
2. ಗೌರವಾನ್ವಿತ ಉಪ ಲೋಕಾಯುಕ್ತರವರ ಶಿಫಾರಸ್ಸು ವರದಿ ಸಂಖ್ಯೆ:ಕಾಂಪ್ಟ್/ಉಪಲೋಕ್/ ಜಿಎಲ್‌ಬಿ.625/ 2003/ಎಆರ್‌ಎಲ್ ಒ-3/ಪಿಪಿ, ದಿನಾಂಕ: 12-09-05.
3. ಸರ್ಕಾರದ ಆದೇಶ ಸಂಖ್ಯೆ: ಕಂಇ 464 ಎಂಎಎಸ್ 2005, ಬೆಂಗಳೂರು, ದಿನಾಂಕ: 24-09-2005.
4. ಮಾನ್ಯ ಉಪ ಲೋಕಾಯುಕ್ತರವರ ಪತ್ರ ಸಂಖ್ಯೆ: ಎಲ್‌ಒಕೆ/ಎಆರ್‌ಇ-3/ಇಎನ್‌ಕ್ಯೂ-15/2008-09, ದಿನಾಂಕ: 08-12-2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರಲ್ಲಿನ ನಿಬಂಧಕರು, ಕರ್ನಾಟಕ ಲೋಕಾಯುಕ್ತರವರ ವರದಿಯಂತೆ ಶ್ರೀ ಎಂ.ಡಿ. ಶಾಮೀದ್, ದ್ವಿದ.ಸ. ಇವರು ಗಂಗಾವತಿ ತಾಲ್ಲೂಕು ಕಛೇರಿಯಲ್ಲಿ ಕಾರ್ಯ ನಿರ್ವಹಿಸುತ್ತಿರುವಾಗ ಶ್ರೀ ಯಂಕಪ್ಪ ಬಿನ್ ಹುಸೇನಪ್ಪ ಪೂಜಾರ್ ಸಾ: ಲಂಬಿನಹಳ್ಳಿ ತಾಲ್ಲೂಕು, ಗಂಗಾವತಿ ಇವರಿಗೆ ಸಂಬಂಧಿಸಿದ ಜಮೀನು ಸ.ನಂ. 10, ವಿಸ್ತೀರ್ಣ 2-20 ಗುಂಟೆ ಇನಾಂ ಜಮೀನನ್ನು ಅಳತೆ ಮಾಡಿ ಪೋಡಿ ತಿದ್ದುಪಡಿ ಮಾಡಿ ಪಹಣಿಯನ್ನು ನೀಡುವ ಬಗ್ಗೆ ಫಿರ್ಯಾದುದಾರರಾದ ಶ್ರೀ ದೇವರಾಜು ಬಿನ್ ಬಂಗಾರಪ್ಪ ಇವರಿಂದ ಅಕ್ರಮವಾಗಿ ಲಂಚ ಕೇಳಿ ಪಡೆಯುತ್ತಿರುವಾಗ ಲೋಕಾಯುಕ್ತ ಪೊಲೀಸರ ದಾಳಿಗೆ ಸಿಕ್ಕಿಬಿದ್ದ ಪ್ರಯುಕ್ತ ಸದರಿ ನೌಕರರು ಎಸಗಿದ ಈ ದುರ್ನಡತೆ ತನಿಖೆಯಿಂದ ಮೇಲ್ನೋಟಕ್ಕೆ ನಿಜವಿರುವುದಾಗಿ ಕಂಡು ಬಂದಿರುವುದರಿಂದ ಕಠಿಣ ದಂಡನೆ ವಿಧಿಸಲು ಅಳವಡಿಸುವ ವಿಧಿವಿಧಾನಗಳ ಅನ್ವಯ ಅವರ ವಿರುದ್ಧ ಇಲಾಖಾ ವಿಚಾರಣೆ ಹೂಡಲು ಹಾಗೂ ಸದರಿ ವಿಚಾರಣೆಯನ್ನು ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿಕೊಡುವಂತೆ ಸಂಖ್ಯೆ (2) ರಲ್ಲಿ ಮಾನ್ಯ ಉಪ ಲೋಕಾಯುಕ್ತರು ಸರ್ಕಾರಕ್ಕೆ ಶಿಫಾರಸ್ಸು ಮಾಡಿರುತ್ತಾರೆ.

ಸದರಿ ಉಪಲೋಕಾಯುಕ್ತರ ವರದಿಯನ್ನು ಸರ್ಕಾರವು ಪರಿಶೀಲಿಸಿ ಶ್ರೀ ಎಂ.ಡಿ. ಶಾಮೀದ್, ದ್ವಿದ.ಸ. ತಾಲ್ಲೂಕು ಕಛೇರಿ, ಗಂಗಾವತಿ ತಾಲ್ಲೂಕು, ಕೊಪ್ಪಳ ಜಿಲ್ಲೆ ಇವರನ್ನು ಸಿಸಿಎ ನಿಯಮಾವಳಿ ನಿಯಮ 11 ಮತ್ತು 11-ಎ ರಡಿಯಲ್ಲಿ ವಿಚಾರಣೆಗೆ ಒಳಪಡಿಸಿ ಸದರಿ ವಿಚಾರಣೆಯನ್ನು ಇದೇ ನಿಯಮಾವಳಿ ನಿಯಮ 14-ಎ ರನ್ವಯ ಮಾನ್ಯ ಲೋಕಾಯುಕ್ತರಿಗೆ ವಹಿಸಿ ಮೇಲೆ ಓದಲಾದ ಕ್ರಮ ಸಂಖ್ಯೆ (3)ರಲ್ಲಿ ಸರ್ಕಾರವು ಆದೇಶಿಸಿತ್ತು.

ಅದರಂತೆ ಕ್ರಮ ಸಂಖ್ಯೆ (4)ರಲ್ಲಿ ಮಾನ್ಯ ಉಪಲೋಕಾಯುಕ್ತರು ವಿಚಾರಣೆ ನಡೆಸಿ ಶ್ರೀ ಎಂ.ಡಿ. ಶಾಮೀದ್, ದ್ವಿದ.ಸ. ತಾಲ್ಲೂಕು ಕಛೇರಿ, ಗಂಗಾವತಿರವರ ಮೇಲಿನ ಆರೋಪವು ಸಾಬೀತಾಗಿಲ್ಲವೆಂದು ವರದಿಯನ್ನು ನೀಡಿರುತ್ತಾರೆ. ವಿಚಾರಣಾ ವರದಿಯನ್ನು ಒಪ್ಪಿಕೊಂಡು ಆಪಾದಿತರಾದ ಶ್ರೀ ಎಂ.ಎಸ್. ಶಾಮೀದ್, ದ್ವಿದ.ಸ. ತಾಲ್ಲೂಕು ಕಛೇರಿ, ಗಂಗಾವತಿ ಇವರ ವಿರುದ್ಧದ ಇಲಾಖಾ ವಿಚಾರಣೆಯನ್ನು ಕೈಬಿಟ್ಟು ಆರೋಪಮುಕ್ತರನ್ನಾಗಿ ಮಾಡಲು ಸರ್ಕಾರವು ತೀರ್ಮಾನಿಸಿ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಕಂಇ 464 ಎಂಎಎಸ್ 2005 ಬೆಂಗಳೂರು, ದಿನಾಂಕ: 17-01-2011.

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಶ್ರೀ ಎಂ.ಎಸ್. ಶಾಮೀದ್, ದ್ವಿತೀಯ ದರ್ಜೆ ಸಹಾಯಕ, ತಾಲ್ಲೂಕು ಕಛೇರಿ, ಗಂಗಾವತಿ ಇವರ ವಿರುದ್ಧದ ಲೋಕಾಯುಕ್ತ ವಿಚಾರಣೆಯನ್ನು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೈಬಿಟ್ಟು ಆರೋಪ ಮುಕ್ತರನ್ನಾಗಿ ಮಾಡಿ, ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಆರ್. ಲೀಲಾವತಿ
ಸರ್ಕಾರದ ಅಧೀನ ಕಾರ್ಯದರ್ಶಿ
ಕಂದಾಯ ಇಲಾಖೆ (ಸೇವೆಗಳು ಎ)

ಪಿ.ಆರ್. 309

ಕಂದಾಯ ಸಚಿವಾಲಯ

ವಿಷಯ : ಶ್ರೀ ಇ. ಬಾಲಕೃಷ್ಣಪ್ಪ, ಹಿಂದಿನ ತಹಶೀಲ್ದಾರ್, ಚಳ್ಳಕೆರೆ ತಾಲ್ಲೂಕು, ಪ್ರಸ್ತುತ ತಹಶೀಲ್ದಾರ್, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ ಇವರನ್ನು ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ.

ಓದಲಾಗಿದೆ : 1. ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರುರವರ ಪತ್ರ ಸಂಖ್ಯೆ: ಸಿಸಿಎ/ಸಿಆರ್/18/10-11, ದಿನಾಂಕ: 15-10-2010.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ (1)ರ ದಿನಾಂಕ: 15-10-2010ರ ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ ರವರ ಪತ್ರದಲ್ಲಿ ಶ್ರೀ ಎಸ್.ಜಿ. ಪ್ರಸನ್ನ, ದ್ವಿ.ದ.ಸ. ಪರಶುರಾಂಪುರ ನಾಡಕಛೇರಿ, ನಿಯೋಜನೆ ಮೇರೆಗೆ ತಾಲ್ಲೂಕು ಕಛೇರಿ, ಚಳ್ಳಕೆರೆ ರವರಿಗೆ ಚಳ್ಳಕೆರೆ ತಾಲ್ಲೂಕಿನಲ್ಲಿರುವ ನವ ಕಾನೂನು ಪದವೀಧರರಿಗೆ ಪ್ರೋತ್ಸಾಹ ಧನ ನೀಡುವ ಶಾಖೆಯನ್ನು ವಹಿಸಲಾಗಿದ್ದು, ಸದರಿ ನೌಕರರು ತಹಶೀಲ್ದಾರ್, ಚಳ್ಳಕೆರೆ ತಾಲ್ಲೂಕು ರವರಿಗೆ ಬಿಡುಗಡೆ ಮಾಡಲಾಗಿದ್ದ ಅನುದಾನದಲ್ಲಿ ಕಾನೂನು ಪದವೀಧರರಿಗೆ ಚೆಕ್ ನೀಡುವ ಬಗ್ಗೆ ತಹಶೀಲ್ದಾರರಿಂದ ಚೆಕ್ಕುಗಳಿಗೆ ಸಹಿ ಪಡೆಯಲಾಗಿದ್ದು, ಅವುಗಳನ್ನು ಸಂಬಂಧಿಸಿದವರಿಗೆ ನೀಡದಿರುವ ವಿಚಾರದಲ್ಲಿ ಸಂಬಂಧಪಟ್ಟ ಬ್ಯಾಂಕಿನಿಂದ ಬ್ಯಾಲೆನ್ಸ್ ಶೀಟ್, ಚೆಕ್ಕುಗಳ ವಿವರಗಳನ್ನು ಪಡೆದು, ಜಿಲ್ಲಾಧಿಕಾರಿಗಳು ಪರಿಶೀಲಿಸಲಾಗಿರುವುದಾಗಿ ದಿನಾಂಕ: 10-08-2009 ರಿಂದ 18-01-2010 ರವರೆಗೆ ವಿವಿಧ ಮೊತ್ತಗಳ ಒಟ್ಟು 29 ಚೆಕ್‌ಗಳನ್ನು ಒಟ್ಟು ಮೊತ್ತ ರೂ. 29,000/- ಕ್ಕೆ ಬರೆದಿದ್ದು, ನಂತರ ನಾಲ್ಕು ಚೆಕ್ಕುಗಳಲ್ಲಿನ ಮೊತ್ತವನ್ನು ತಿದ್ದಿ, ರೂ. 60,000/- ಗಳ ಹೆಚ್ಚಿಗೆ ಹಣವನ್ನು ಬ್ಯಾಂಕಿನಿಂದ ಡ್ರಾ ಮಾಡಿರುವುದರ ಜೊತೆಗೆ 14 ಚೆಕ್ಕುಗಳನ್ನು ಫಲಾನುಭವಿಗಳ ಫೋರ್ಜರಿ ಸಹಿ ಮಾಡಿ ಒಟ್ಟು ರೂ. 1,01,000/- ಮೊಬಲಗಿನ ಸರ್ಕಾರದ ಹಣವನ್ನು ದುರುಪಯೋಗ ಮಾಡಿರುವ ಹಿನ್ನೆಲೆಯಲ್ಲಿ ಈ ನೌಕರರ ವಿರುದ್ಧ ಪೋಲೀಸ್ ಠಾಣೆಯಲ್ಲಿ ಕ್ರಿಮಿನಲ್ ಮೊಕದ್ದಮೆ ದಾಖಲಿಸಿ, ನ್ಯಾಯಾಂಗ ಬಂಧನದಲ್ಲಿಟ್ಟಿರುವ ಕಾರಣ ದಿನಾಂಕ: 23-06-2010 ರಿಂದ ಅನ್ವಯವಾಗುವಂತೆ ನೌಕರರನ್ನು ನಿಲಂಬನೆಯಲ್ಲಿ ಇಟ್ಟಿರುವುದಾಗಿ ಜಿಲ್ಲಾಧಿಕಾರಿಗಳು ವರದಿ ನೀಡಿರುತ್ತಾರೆಂದು ತಿಳಿಸಿರುತ್ತಾರೆ.

ಅಲ್ಲದೆ ಜಿಲ್ಲಾಧಿಕಾರಿಗಳು ಈ ವಿಚಾರದಲ್ಲಿ ಶ್ರೀ ಇ. ಬಾಲಕೃಷ್ಣಪ್ಪ, ತಹಶೀಲ್ದಾರ್, ಚಳ್ಳಕೆರೆ ತಾಲ್ಲೂಕು ಇವರಿಗೆ ಕಾರಣ ಕೇಳಿ ನೋಟೀಸ್ ನೀಡಿ ಅವರ ವಿವರಣೆ ಪಡೆದಿರುವುದಾಗಿ, ಸದರಿ ವಿವರಣೆಯಲ್ಲಿ ಶ್ರೀ ಇ. ಬಾಲಕೃಷ್ಣಪ್ಪ, ತಹಶೀಲ್ದಾರ್‌ರವರು ಬೇಜವಾಬ್ದಾರಿಯುತ ಹಾರಿಕೆ ಉತ್ತರವನ್ನು ಸಲ್ಲಿಸಿರುವುದಾಗಿ, ನೌಕರರ ಮೇಲೆ ನಂಬಿಕೆಯಿಂದ ಚೆಕ್‌ಗಳಿಗೆ ಸಹಿ ಮಾಡಿರುವುದಾಗಿ ತಮ್ಮ ಕಾರ್ಯ ಒತ್ತಡದಿಂದ ನೌಕರನ ತಪ್ಪನ್ನು ಗಮನಿಸಲಾಗಿರುವುದಿಲ್ಲವೆಂದು ನೀಡಿರುವ ವಿವರಣೆ ಸಮಂಜಸವಲ್ಲವೆಂದು ಜಿಲ್ಲಾಧಿಕಾರಿಗಳು ತಮ್ಮ ಪತ್ರದಲ್ಲಿ ತಿಳಿಸುತ್ತಾ, ಶ್ರೀ ಇ. ಬಾಲಕೃಷ್ಣಪ್ಪ, ತಹಶೀಲ್ದಾರ್‌ರವರು ಕೆಲವೊಂದು ಗುರುತರವಾದ ಕರ್ತವ್ಯ ಲೋಪ ಎಸಗಿರುವುದಾಗಿ ತಿಳಿಸಿರುತ್ತಾರೆ.

ಜಿಲ್ಲಾಧಿಕಾರಿಗಳು ಸದರಿ ಪತ್ರದಲ್ಲಿ ತಿಳಿಸಿರುವಂತೆ ತಹಶೀಲ್ದಾರ್ ರವರು ಪ್ರಮುಖವಾದ ಈ ಶಾಖೆಯನ್ನು ಶ್ರೀ ಎಸ್.ಜಿ. ಪ್ರಸನ್ನ, ದ್ವಿ.ದ.ಸ. ರವರಿಗೆ ನಿರ್ವಹಿಸಲು ನೀಡಿದ್ದು, ಸದರಿ ನೌಕರರು ಅವರ ದುಷ್ಕೃತ್ಯಗಳಿಂದಾಗಿ ಈ ಹಿಂದೆ ಅಮಾನತ್ತುಗೊಂಡು ಇಲಾಖಾ ವಿಚಾರಣೆ ಎದುರಿಸುತ್ತಿರುವವರಾಗಿದ್ದು, ಇಂತಹವರಿಗೆ ಹಣಕಾಸು ವ್ಯವಹಾರದ ಜವಾಬ್ದಾರಿಯನ್ನು ತಹಶೀಲ್ದಾರ್‌ರವರು ವಹಿಸಿರುವುದಾಗಿ, ಪ್ರೋತ್ಸಾಹಧನ ಪಾವತಿಸಲು ಚೆಕ್ ಬರೆಯುವ ಮುನ್ನ ಮಂಜೂರಾತಿಯನ್ನು ಕಡತದಲ್ಲಿ ಮಾಡದೇ ಇರುವುದು ಹಾಗೂ ಈ ಬಗ್ಗೆ ಕಡತ ನಿರ್ವಹಿಸದೇ ಇರುವುದು, ಸಂಬಂಧಿಸಿದ ಶಿರಸ್ತೇದಾರ್‌ರವರ ಗಮನಕ್ಕೆ ತರದೆ ವಿಷಯ ನಿರ್ವಾಹಕರು ಚೆಕ್ ಬರೆದು ನೇರವಾಗಿ ತಹಶೀಲ್ದಾರ್‌ರವರ ಸಹಿ ಮಾಡಿಸುತ್ತಿರುವ ಬಗ್ಗೆ ಪ್ರೋತ್ಸಾಹ ಧನ ನೀಡುವ ಚೆಕ್‌ಗಳನ್ನು ಅಕೌಂಟ್ ಪೇಯಿ ಅಥವಾ ಕ್ರಾಸ್ ಮಾಡದೆ ಚೆಕ್ ಸಹಿ ಮಾಡಿರುವ ಬಗ್ಗೆ ಚೆಕ್‌ಗೆ ಸಹಿ ಮಾಡುವ ಮುನ್ನ ಚೆಕ್‌ನಲ್ಲಿ ಅಂಕಿ ಹಾಗೂ ಪದಗಳಲ್ಲಿ ನಮೂದಿಸಿರುವ ಮೊತ್ತ ತಿದ್ದಲು ಆಸ್ಪದ ಇಲ್ಲದಂತೆ ಬರೆದಿರುವುದನ್ನು ಪರಿಶೀಲಿಸದೆ ಸಹಿ ಮಾಡಿರುವುದು, ಚೆಕ್‌ಗಳನ್ನು ಫಲಾನುಭವಿಗಳಿಗೆ ನೀಡಿದ ಬಗ್ಗೆ ದಾಖಲೆ ಪಡೆಯದಿರುವುದು, ಅನುದಾನ ಬಿಡುಗಡೆ ಮತ್ತು ಖರ್ಚು ಮಾಡಿದ ಬಗ್ಗೆ ನಗದು ವಹಿ ನಿರ್ವಹಿಸದೇ ಇರುವ ಮುಂತಾದ ಆರೋಪಗಳನ್ನು ಶ್ರೀ ಇ. ಬಾಲಕೃಷ್ಣಪ್ಪ, ತಹಶೀಲ್ದಾರ್‌ರವರ ವಿರುದ್ಧ ಮಾಡಿದ್ದು, ತಹಶೀಲ್ದಾರ್‌ರವರು ಈ ಎಲ್ಲಾ ನ್ಯೂನತೆಗಳಿಗೆ ಗಮನಹರಿಸದೆ ಕರ್ತವ್ಯ ಚ್ಯುತಿ ಎಸಗಿ, ರೂ. 1,01,000/- ಗಳ ಸರ್ಕಾರಿ ಹಣ ದುರುಪಯೋಗಕ್ಕೆ ಕಾರಣರಾಗಿರುವುದರಿಂದ ಅವರ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲು ಕೋರಿರುತ್ತಾರೆ.

ತಹಶೀಲ್ದಾರರು ಒಬ್ಬ ಜವಾಬ್ದಾರಿಯುತ ಅಧಿಕಾರಿಯಾಗಿದ್ದು, ಹಣಕಾಸು ನಿರ್ವಹಣೆಯ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸದೆ ಹಣಕಾಸಿನ ವ್ಯವಹಾರದಲ್ಲಿ ಅಗತ್ಯ ಹಾಗೂ ಅವಶ್ಯ ದಾಖಲೆಗಳನ್ನು ನಿರ್ವಹಿಸದೆ ರೂ. 1,01,000/- ಗಳ ಸರ್ಕಾರಿ ಹಣ ದುರುಪಯೋಗಕ್ಕೆ ಕಾರಣವಾಗಿ ಕರ್ತವ್ಯ ಲೋಪ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುವುದರಿಂದ ಜಿಲ್ಲಾಧಿಕಾರಿಗಳ ವರದಿ ಪರಿಗಣಿಸಿ, ಶ್ರೀ ಇ. ಬಾಲಕೃಷ್ಣಪ್ಪ, ತಹಶೀಲ್ದಾರ್ ಚಳ್ಳಕೆರೆ ತಾಲ್ಲೂಕುರವರನ್ನು ಇಲಾಖಾ ವಿಚಾರಣೆಗೆ ಒಳಪಡಿಸಿ, ಸೇವೆಯಿಂದ ಅಮಾನತ್ತುಗೊಳಿಸುವ ಬಗ್ಗೆ ಸರ್ಕಾರಕ್ಕೆ ವರದಿಯನ್ನು ಸಲ್ಲಿಸಿರುತ್ತಾರೆ.

ಪ್ರಾದೇಶಿಕ ಆಯುಕ್ತರು, ಬೆಂಗಳೂರು ವಿಭಾಗ, ಬೆಂಗಳೂರು ಹಾಗೂ ಜಿಲ್ಲಾಧಿಕಾರಿಗಳು, ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ, ಇವರುಗಳ ವರದಿಯನ್ನು ಪರಿಗಣಿಸಿ, ಶ್ರೀ ಇ. ಬಾಲಕೃಷ್ಣಪ್ಪ, ಹಿಂದಿನ ತಹಶೀಲ್ದಾರ್, ಚಳ್ಳಕೆರೆ ತಾಲ್ಲೂಕು, ಪ್ರಸ್ತುತ ತಹಶೀಲ್ದಾರ್, ಕಲಘಟಗಿ ತಾಲ್ಲೂಕು, ಧಾರವಾಡ ಜಿಲ್ಲೆ, ಇಲ್ಲಿ ಇವರು ಕರ್ತವ್ಯ ಲೋಪವೆಸಗಿ ಕರ್ನಾಟಕ ನಾಗರೀಕ ಸೇವಾ (ನಡವಳಿ) ನಿಯಮಗಳು 1966ರ ನಿಯಮ 3ನ್ನು ಸ್ಪಷ್ಟವಾಗಿ ಉಲ್ಲಂಘಿಸಿರುವುದು ಕಂಡುಬಂದಿದ್ದು, ಇವರ ವಿರುದ್ಧ ಇಲಾಖಾ ವಿಚಾರಣೆ ನಡೆಸಲು ತೀರ್ಮಾನಿಸಿ ಸೇವೆಯಿಂದ ಅಮಾನತ್ತುಗೊಳಿಸಲು ತೀರ್ಮಾನಿಸಿದೆ. ಆದ್ದರಿಂದ ಈ ಕೆಳಕಂಡಂತೆ ಆದೇಶ.

ಸರ್ಕಾರಿ ಆದೇಶ ಸಂಖ್ಯೆ : ಕಂಇ 67 ಎಡಿಇ 2010 ಬೆಂಗಳೂರು, ದಿನಾಂಕ: 10-01-2011.

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಗಳು 1957ರ ನಿಯಮ 10(1)(ಡಿ) ಮತ್ತು 10 (3)ರಲ್ಲಿ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಶ್ರೀ ಇ. ಬಾಲಕೃಷ್ಣಪ್ಪ, ಹಿಂದಿನ ತಹಶೀಲ್ದಾರ್,

ಚಳ್ಳಕೆರೆ ತಾಲ್ಲೂಕು, ಪ್ರಸ್ತುತ ತಹಶೀಲ್ದಾರ್, ಕಲಘಟಗಿ ತಾಲ್ಲೂಕು ಧಾರವಾಡ ಜಿಲ್ಲೆ ಇವರ ವಿರುದ್ಧ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಸೇವೆಯಿಂದ ಅಮಾನತ್ತುಗೊಳಿಸಿ ಆದೇಶಿಸಿದೆ.

ಅಮಾನತ್ತಿನ ಅವಧಿಯಲ್ಲಿ ಸದರಿ ಅಧಿಕಾರಿಯು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ನಿಯಮ 98 ರನ್ವಯ ಜೀವನಾಧಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ ಮತ್ತು ಜಿಲ್ಲಾಧಿಕಾರಿಗಳು, ಧಾರವಾಡ ಜಿಲ್ಲೆ ಇವರ ಅನುಮತಿ ಪಡೆಯದೇ ಕೇಂದ್ರಸ್ಥಾನವನ್ನು ಬಿಡತಕ್ಕದ್ದಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 310

ಎಸ್.ಬಿ. ಸಸಾಲಟ್ಟಿ

ಸರ್ಕಾರದ ಅಧೀನ ಕಾರ್ಯದರ್ಶಿ

ಕಂದಾಯ ಇಲಾಖೆ

(ಸೇವೆಗಳು-3)

ಮೂಲ ಸೌಲಭ್ಯ ಅಭಿವೃದ್ಧಿ ಸಚಿವಾಲಯ

ವಿಷಯ : ಮಂಗಳೂರು ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡಕ್ಕೆ ಹೆಚ್ಚುವರಿ ಸಂಪರ್ಕ ರಸ್ತೆಯನ್ನು ನಿರ್ಮಾಣ ಮಾಡುವ ಬಗ್ಗೆ.

ಓದಲಾಗಿದೆ :

1. ಜಿಲ್ಲಾಧಿಕಾರಿ, ದಕ್ಷಿಣ ಕನ್ನಡ, ಮಂಗಳೂರು ಇವರ ಪತ್ರ ಸಂಖ್ಯೆ: ಎಲ್‌ಎಕ್ಯೂ.ಎಂ.ಎಸ್. ಸಿ.ಸ.ಆರ್.213/09-10(ಬಿ.1) ದಿನಾಂಕ: 31-10-2009.
2. ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ದಕ್ಷಿಣ ಕನ್ನಡ ಜಿಲ್ಲಾ ಪಂಚಾಯತ್, ಮಂಗಳೂರು ಇವರ ದಿನಾಂಕ: 22-12-2010ರ ಪತ್ರ ಸಂಖ್ಯೆ: ಅ.ಸ.ಪ.ಸಂ. ದಜಿ ಪಂ ಮುಕಾಅ/9/2010-11.

ಪ್ರಸ್ತಾವನೆ:

ಕ್ರ.ಸಂ. (1)ರಲ್ಲಿ ಓದಲಾದ ಪತ್ರದಲ್ಲಿ ಜಿಲ್ಲಾಧಿಕಾರಿಗಳು, ದಕ್ಷಿಣ ಕನ್ನಡ ಜಿಲ್ಲೆ, ಮಂಗಳೂರು ತಾಲ್ಲೂಕು, ಬಜ್ಪೆ ಕೆಂಜಾರು ಬಳಿ ಹೊಸ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ಕಾರ್ಯಾರಂಭವಾಗಲಿದ್ದು ವಿಮಾನ ನಿಲ್ದಾಣದಲ್ಲಿ ಸಂಚರಿಸುವ ಪ್ರಯಾಣಿಕ ವಾಹನಗಳ ಸಂಖ್ಯೆ ಅಧಿಕವಾಗುವುದರಿಂದ, ಎರಡು ಸಂಪರ್ಕ ರಸ್ತೆಗಳ ಅಗತ್ಯತೆಯ ಬಗ್ಗೆ ವಿಮಾನ ನಿಲ್ದಾಣಗಳ ಪ್ರಾಧಿಕಾರದವರು ಮನವಿ ಮಾಡಿಕೊಂಡಿರುವುದಾಗಿ ತಿಳಿಸಿ, ಅದರಂತೆ ಹೊಸ ಟರ್ಮಿನಲ್ ಕಟ್ಟಡಕ್ಕೆ ಸಂಪರ್ಕ ರಸ್ತೆ ನಿರ್ಮಾಣದ ಬಗ್ಗೆ ಯೋಜನೆಯನ್ನು ತಾಂತ್ರಿಕ ಸಲಹೆ ಮೇರೆಗೆ ರೂ. 760.00 ಲಕ್ಷಗಳಿಗೆ ಅಂದಾಜು ಪಟ್ಟಿಯನ್ನು ತಯಾರಿಸಿ, ಅನುಮೋದನೆ ಹಾಗೂ ಅನುದಾನ ಬಿಡುಗಡೆ ಮಾಡುವಂತೆ, ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಕೆಂಜಾರುನಿಂದ ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡದವರೆಗೆ ಸುಮಾರು 1,000 ಮೀಟರ್ ಉದ್ದದ ಚತುಷ್ಪಥ ರಸ್ತೆ ಕಾಮಗಾರಿಯ ರೂ. 7.6 ಕೋಟಿ ಅಂದಾಜು ವೆಚ್ಚ ಪ್ರಸ್ತಾವನೆಗೆ ಸರ್ಕಾರ ಅನುಮೋದನೆ ನೀಡಿ ಈ ಕಾಮಗಾರಿಯನ್ನು ಕೆಆರ್‌ಡಿಸಿಎಲ್‌ಗೆ ವಹಿಸಲು ಸರ್ಕಾರ ನಿರ್ಧರಿಸಿರುವುದರಿಂದ ಈ ಕೆಳಕಂಡಂತೆ ಆದೇಶಿಸಿದೆ.

ಸರ್ಕಾರದ ಆದೇಶ ಸಂಖ್ಯೆ : ಮೂಅಇ 114 ರಾರಾವಿ 2009 ಬೆಂಗಳೂರು, ದಿನಾಂಕ: 25-01-2011.

ಕೆಂಜಾರುವಿನಿಂದ ಮಂಗಳೂರು ವಿಮಾನ ನಿಲ್ದಾಣದ ಹೊಸ ಟರ್ಮಿನಲ್ ಕಟ್ಟಡಕ್ಕೆ ಚತುಷ್ಪಥ (ಸುಮಾರು 1,000 ಮೀ. ರಸ್ತೆಯನ್ನು ಡೆಕ್ಕನ್ ಪಾರ್ಕ್ ಹೋಟೆಲ್ ಪಕ್ಕದಿಂದ ನಿರ್ಮಿಸುವ ಕಾಮಗಾರಿಯನ್ನು ಜಿಲ್ಲಾ ಪಂಚಾಯತ್, ದಕ್ಷಿಣ ಕನ್ನಡ ಜಿಲ್ಲೆ ಇವರು ಅಂದಾಜಿಸಿರುವ ಮೊತ್ತ ರೂ. 7.60 (ರೂ. ಏಳು ಕೋಟಿ ಅರವತ್ತು ಲಕ್ಷಗಳು) ಕೋಟಿಗಳಿಗೆ ಅನುಮೋದಿಸಿ ಜಿಲ್ಲಾ ಪಂಚಾಯತ್ ಸಹಮತಿಯೊಂದಿಗೆ ಕೆಆರ್‌ಡಿಸಿಎಲ್ ಗೆ ವಹಿಸಲು ಸರ್ಕಾರದ ಮಂಜೂರಾತಿಯನ್ನು ನೀಡಲಾಗಿದೆ.

2. ಈ ಮೊತ್ತವನ್ನು ವ್ಯವಸ್ಥಾಪಕ ನಿರ್ದೇಶಕರು, ಕೆಆರ್‌ಡಿಸಿಎಲ್ ಇವರು ಸರ್ಕಾರದ ಅಧೀನ ಕಾರ್ಯದರ್ಶಿ, ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ ಇವರ ಮೇಲು ರುಜುವಿನೊಂದಿಗೆ ಕರ್ನಾಟಕ ರಾಜ್ಯ ಹುಜೂರ್ ಖಜಾನೆ, ಬೆಂಗಳೂರು ಇಲ್ಲಿ ತೆಗೆಯಲು ಅನುಮತಿ ನೀಡಲಾಗಿದೆ.

3. ಈ ಮೊತ್ತವನ್ನು 2010-11ನೇ ಸಾಲಿನಲ್ಲಿ ಲೆಕ್ಕ ಶೀರ್ಷಿಕೆ 5465-01-190-2-05 ಪರ್ಯಾಯ ರಸ್ತೆಗಳು-ಬಂಡವಾಳ ಹೂಡಿಕೆ (ಯೋಜನೆ)ಯಡಿ ಒದಗಿಸಿರುವ ರೂ. 1,500.00 ಲಕ್ಷಗಳ ಅನುದಾನದಲ್ಲಿ ಭರಿಸುವುದು.

4. ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 1188 ವೆಚ್ಚ-1/2010 ದಿನಾಂಕ: 08-07-2010 ರಲ್ಲಿ ನೀಡಿರುವ ಸಹಮತಿಯೊಂದಿಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,

ಪಿ.ಆರ್. 311

ಸಿ.ಎ. ಬಾಬುರವೀಂದ್ರನಾಥ್ ಪಟೇಲ್

ಸರ್ಕಾರದ ಅಧೀನ ಕಾರ್ಯದರ್ಶಿ

ಮೂಲಸೌಲಭ್ಯ ಅಭಿವೃದ್ಧಿ ಇಲಾಖೆ

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬	ಬೆಂಗಳೂರು, ಗುರುವಾರ, ಮಾರ್ಚ್ ೨೪, ೨೦೧೧ (ಚೈತ್ರ ೩, ಶಕ ವರ್ಷ ೧೯೩೨)	ಸಂಚಿಕೆ ೧೨

ಭಾಗ – ೨

ನೇಮಕಗಳು, ಸ್ಥಳ ನೇಮಕಗಳು, ವರ್ಗಾವಣೆಗಳು, ರಜೆ ಮತ್ತು ಅಧಿಕಾರಿಗಳು, ಕರ್ನಾಟಕ ಉಚ್ಚ ನ್ಯಾಯಾಲಯದ ಅಧಿಸೂಚನೆಗಳು

ಕಂದಾಯ ಸಚಿವಾಲಯ

ತಿದ್ದುಪಡಿ

ಸಂಖ್ಯೆ: ಆರ್‌ಡಿ 13 ಎಲ್‌ಜಿಪಿ 2011, ಬೆಂಗಳೂರು, ದಿನಾಂಕ: 19ನೇ ಫೆಬ್ರವರಿ, 2011

ಸರ್ಕಾರದ ಅಧಿಸೂಚನೆ ಸಂಖ್ಯೆ:ಆರ್‌ಡಿ 9 ಎಲ್‌ಜಿಪಿ 2009 (ಪಿ), ದಿ:28.05.2010ರಲ್ಲಿ ಕೊಡಗು ಜಿಲ್ಲೆಯ ಮಡಿಕೇರಿ ತಾಲ್ಲೂಕು ಬಗರ್ ಹುಕುಂ ಸಾಗುವಳಿ ಸಕ್ರಮೀಕರಣ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಿಸಲಾಗಿದ್ದ ಶ್ರೀ ಎಸ್.ಪಿ. ಕುಶಾಲಪ್ಪ, ಮುಕ್ಕೋಡ್ಲು ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲ್ಲೂಕು ಇವರ ಬದಲಾಗಿ ಶ್ರೀ ನಾಪಂಡ ಎಂ. ಕಾಳಪ್ಪ, ಮಕ್ಕಂದೂರು ಗ್ರಾಮ ಮತ್ತು ಅಂಚೆ, ಮಡಿಕೇರಿ ತಾಲ್ಲೂಕು ಇವರನ್ನು ಅಧ್ಯಕ್ಷರನ್ನಾಗಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಲಾಗಿದೆ.

ಎಲ್. ಕೃಷ್ಣಪ್ಪ,
ಪೀಠಾಧಿಕಾರಿ,
ಕಂದಾಯ ಇಲಾಖೆ (ಭೂ.ಮಂ-2)

ಪಿ.ಆರ್. 302

ಒಳಾಡಳಿತ ಸಚಿವಾಲಯ

ತಿದ್ದೋಲೆ

ಸಂಖ್ಯೆ: ಹೆಚ್‌ಡಿ 152 ಪಿಆರ್‌ಇ 2010, ಬೆಂಗಳೂರು, ದಿನಾಂಕ: 24ನೇ ಫೆಬ್ರವರಿ, 2011

ಸರ್ಕಾರದ ಅಧಿಸೂಚನೆ ಸಂಖ್ಯೆ: ಹೆಚ್‌ಡಿ 152 ಪಿಆರ್‌ಇ 2010 ದಿನಾಂಕ: 14-02-2011ರಲ್ಲಿನ ಆದೇಶ ಭಾಗದಲ್ಲಿ ಕ್ರಮ ಸಂಖ್ಯೆ: 1ರಲ್ಲಿ ನಮೂದಿಸಿರುವ "ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು, ಬೆಂಗಳೂರು" ಎಂಬುದರ ಬದಲಿಗೆ **"ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರು ಮತ್ತು ಕಾರಾಗೃಹಗಳ ಮಹಾನಿರೀಕ್ಷಕರು, ಬೆಂಗಳೂರು"** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ. ಕೃಷ್ಣಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಸೆರೆಮನೆ ಮತ್ತು ಸಿನಿಮಾ)

ಪಿ.ಆರ್. 303

ಅಧಿಸೂಚನೆ

ಸಂಖ್ಯೆ: ಒಇ 44 ಪೊಪಿಲಿ 2010, ಬೆಂಗಳೂರು, ದಿನಾಂಕ: 28ನೇ ಫೆಬ್ರವರಿ, 2011

ಶ್ರೀ ಆರ್. ರಂಗೇಗೌಡ, ಸಹಾಯಕ ನಿರ್ದೇಶಕರು, ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇವರಿಗೆ ವೇತನ ಶ್ರೇಣಿ ರೂ. 14050-25050ರ ಉಪ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ನೀಡಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ

ಚಳ್ಳಕೆರೆ ತಾಲ್ಲೂಕು, ಪ್ರಸ್ತುತ ತಹಶೀಲ್ದಾರ್-ರಕರು, ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ, ಗುಲ್ಬರ್ಗಾ ಇಲ್ಲಿ ಖಾಲಿ ಇರುವ ಹುದ್ದೆ ...ಡಲೇ ಜಾರಿಗೆ ಬರುವಂತೆಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 304

ಅಧಿಸೂಚನೆ

ಸಂಖ್ಯೆ: ಒಇ 44 ಪೊಸಲಿ 2010, ಬೆಂಗಳೂರು, ದಿನಾಂಕ: 28ನೇ ಫೆಬ್ರವರಿ, 2011

ಶ್ರೀ ಬಿ.ಸಿ. ರವೀಂದ್ರ, ವೈಜ್ಞಾನಿಕ ಸಹಾಯಕ (ಪ್ರಕ್ಷೇಪ ವಿಭಾಗ), ನ್ಯಾಯ ವಿಜ್ಞಾನ ಪ್ರಯೋಗಾಲಯ, ಬೆಂಗಳೂರು ಇವರಿಗೆ ವೇತನ ಶ್ರೇಣಿ ರೂ. 11400-21600ರ ವೈಜ್ಞಾನಿಕ ಅಧಿಕಾರಿ (ಪ್ರಕ್ಷೇಪ ವಿಭಾಗ) ಹುದ್ದೆಗೆ ಮುಂಬಡ್ತಿ ನೀಡಿ ಈ ಕೂಡಲೇ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ, ಶ್ರೀ ಬಿ.ಕೆ. ಸತ್ಯತೀರ್ಥ, ವೈಜ್ಞಾನಿಕ ಅಧಿಕಾರಿ, ಬೆಂಗಳೂರು ವಿಭಾಗ ಇವರ ಸ್ವ-ಇಚ್ಛಾ ನಿವೃತ್ತಿಯಿಂದ ತೆರವಾದ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 305

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 34 ಆಸೇವ 2011, ಬೆಂಗಳೂರು, ದಿನಾಂಕ: 26ನೇ ಫೆಬ್ರವರಿ, 2011

ಮಾರ್ಚ್, 2011ರಲ್ಲಿ ಬೆಳಗಾವಿಯಲ್ಲಿ ನಡೆಯಲಿರುವ ವಿಶ್ವ ಕನ್ನಡ ಸಮ್ಮೇಳನದ ಕಾರ್ಯನಿರ್ವಹಿಸಲು ಈ ಕೆಳಕಂಡ ಕೆ.ಎ.ಎಸ್. (ಆಯ್ಕೆ ಶ್ರೇಣಿ/ಹಿರಿಯ ಶ್ರೇಣಿ/ಕಿರಿಯ ಶ್ರೇಣಿ) ಅಧಿಕಾರಿಗಳನ್ನು ಅನ್ಯ ಕಾರ್ಯನಿಮಿತ್ತ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ದಿನಾಂಕ 13-03-2011ರವರೆಗೆ ನಿಯೋಜಿಸಲಾಗಿದೆ.

ಕ್ರ.ಸಂ.	ಅಧಿಕಾರಿಗಳ ಹೆಸರು ಮತ್ತು ಪದನಾಮ
1	ಶ್ರೀ ಮೇಘಣ್ಣವರ್, ಪಿ.ಎ., ಕೆ.ಎ.ಎಸ್. (ಆಯ್ಕೆ ಶ್ರೇಣಿ), ನಿರ್ದೇಶಕರು, (ಗ್ರಾಮೀಣ ಮೂಲ ಭೂತ ಸೌಲಭ್ಯಗಳು) ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ, ಬೆಂಗಳೂರು
2	ಶ್ರೀ ಎಸ್.ಎಂ. ಸೊನ್ನದ್, ಕೆ.ಎ.ಎಸ್. (ಹಿರಿಯ ಶ್ರೇಣಿ), ಸರ್ಕಾರದ ಉಪ ಕಾರ್ಯದರ್ಶಿ, ನಗರಾಭಿವೃದ್ಧಿ ಇಲಾಖೆ, ಬೆಂಗಳೂರು
3	ಶ್ರೀ ಶ್ರೀನಿವಾಸ ಕೆ., ಕೆ.ಎ.ಎಸ್. (ಕಿರಿಯ ಶ್ರೇಣಿ), ಸ್ಥಳ ನಿರೀಕ್ಷಣೆಯಲ್ಲಿ

ಮೇಲ್ಕಂಡ ಅಧಿಕಾರಿಗಳು ಜಿಲ್ಲಾಧಿಕಾರಿಗಳು, ಬೆಳಗಾವಿ ಜಿಲ್ಲೆ, ಬೆಳಗಾವಿ ಇವರಲ್ಲಿ ತಕ್ಷಣವೇ ಕಾರ್ಯವರದಿ ಮಾಡಿಕೊಂಡು, ಜಿಲ್ಲಾಧಿಕಾರಿ ಮತ್ತು ವಿಶ್ವ ಕನ್ನಡ ಸಮ್ಮೇಳನದ ಅಧಿಕಾರಯುಕ್ತ ವಿಶೇಷಾಧಿಕಾರಿ (Empowered Officer On Special Duty) ಇವರ ಉಸ್ತುವಾರಿಯಲ್ಲಿ ಕಾರ್ಯನಿರ್ವಹಿಸತಕ್ಕದ್ದು ಹಾಗೂ ಸಮ್ಮೇಳನವು ಮುಕ್ತಾಯವಾದ ನಂತರ ದಿನಾಂಕ : 14-03-2011ರಂದು ಅವರುಗಳು ಕಾರ್ಯನಿರ್ವಹಿಸುತ್ತಿದ್ದ ಹಿಂದಿನ ಹುದ್ದೆಯಲ್ಲಿ ಕರ್ತವ್ಯಕ್ಕೆ ಹಾಜರಾಗುವುದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿ.ಆ.ಸು.ಇಲಾಖೆ (ಸೇವೆಗಳು-2)

ಪಿ.ಆರ್. 306

ಅಧಿಸೂಚನೆ

ಸಂಖ್ಯೆ: ಸಿಆಸುಇ 569 ಸಅಸೇ 2010, ಬೆಂಗಳೂರು, ದಿನಾಂಕ: 28ನೇ ಫೆಬ್ರವರಿ, 2011

ಶ್ರೀ ಆರ್.ಸಿ. ಹೊನ್ನಭಂಡಾರ್, ವ್ಯವಸ್ಥಾಪಕರು, ಕರ್ನಾಟಕ ರಾಜ್ಯ ಹಣಕಾಸು ಸಂಸ್ಥೆ, ವಲಯ ಕಛೇರಿ, ಮೈಸೂರು ಇವರನ್ನು ...ಾಣದಿಂದ ಜಾರಿಗೆ ಬರುವಂತೆ ಮಾನ್ಯ ಅರಣ್ಯ ಸಚಿವರ ಆಪ್ತ ಶಾಖೆಯಲ್ಲಿ ಒಂದು ಗ್ರೂಫ್-ಸಿ ಹುದ್ದೆಯನ್ನು ಗ್ರೂಫ್-ಎ ಹುದ್ದೆಗೆ ಉನ್ನತೀಕರಿಸಿ ಸಚಿವರ ...ಶೇಷ ಕರ್ತವ್ಯಾಧಿಕಾರಿ ಹುದ್ದೆಯಲ್ಲಿ ಗುತ್ತಿಗೆ ಆಧಾರದ ಮೇಲೆ ಒಂದು ವರ್ಷದ ಅವಧಿಗೆ ಅಥವಾ ಮಾನ್ಯ ಸಚಿವರ ಪದಾವಧಿಯವರೆಗೆ ಇವುಗಳಲ್ಲಿ ...ಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿದೆ.

ಮಾನ್ಯ ಅರಣ್ಯ ಸಚಿವರ ಆಪ್ತ ಶಾಖೆಯಲ್ಲಿ ಒಂದು ಗ್ರೂಫ್-ಸಿ ಹುದ್ದೆಯನ್ನು ಭರ್ತಿ ಮಾಡದಂತೆ ಹಾಗೂ ಈ ಹುದ್ದೆಯಲ್ಲಿ ನೌಕರರು ...ರ್ತವ್ಯ ನಿರ್ವಹಿಸುತ್ತಿದ್ದಲ್ಲಿ ಅವರ ಸೇವೆಯನ್ನು ಹಿಂದಿರುಗಿಸುವಂತೆ ಸಹ ಆದೇಶಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಆರ್. 307

ಅಧಿಸೂಚನೆ

ಸಂಖ್ಯೆ: ಸಿಆಸುಇ 16 ಸಅಸೇ 2011, ಬೆಂಗಳೂರು, ದಿನಾಂಕ: 24ನೇ ಫೆಬ್ರವರಿ, 2011

ಶ್ರೀ ಆರ್ಥರ್ ಹ್ಯಾರಿ ಗೊನ್ಸಾಲ್ವಿಸ್, ನಿವೃತ್ತ ಸರ್ಕಾರದ ಅಧೀನ ಕಾರ್ಯದರ್ಶಿ, ಕರ್ನಾಟಕ ಸರ್ಕಾರದ ಸಚಿವಾಲಯ, ಇವರನ್ನು ಮಾನ್ಯ ...ುಖ್ಯಮಂತ್ರಿಯವರ ಸಲಹೆಗಾರರು, (ನಗರಾಭಿವೃದ್ಧಿ ವಿಷಯಗಳು) ಇವರ ವಿಶೇಷಾಧಿಕಾರಿಯನ್ನಾಗಿ ಗುತ್ತಿಗೆ ಆಧಾರದ ಮೇಲೆ ದಿನಾಂಕ : 01-01-...011ರಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಅಥವಾ ಮಾನ್ಯ ಮುಖ್ಯಮಂತ್ರಿಯವರ ಸಲಹೆಗಾರರ ಪದಾವಧಿಯವರೆಗೆ ...ವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ನೇಮಿಸಿದೆ.

ಶ್ರೀ ಆರ್ಥರ್ ಹ್ಯಾರಿ ಗೊನ್ಸಾಲ್ವಿಸ್ ಇವರ ಗುತ್ತಿಗೆ ನೇಮಕಾತಿಗೆ ಸಂಬಂಧಿಸಿದಂತೆ ಸೇವಾ ಷರತ್ತುಗಳ ಬಗ್ಗೆ ಪ್ರತ್ಯೇಕವಾಗಿ ಆದೇಶ ...ೊರಡಿಸಲಾಗುವುದು.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಆರ್. 308

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಸೇರ್ಪಡೆ

ಸಂಖ್ಯೆ: ಪಸಂಮೀ 81 ಪಅಸೇ 2011, ಬೆಂಗಳೂರು, ದಿನಾಂಕ: 24ನೇ ಫೆಬ್ರವರಿ, 2011

ಅಧಿಸೂಚನೆ ಸಂಖ್ಯೆ : ಪಸಂಮೀ 248 ಪಅಸೇ 2010, ದಿನಾಂಕ : 27-11-2010ರನ್ವಯ ಪಶುಪಾಲನಾ ಮತ್ತು ಪಶುವೈದ್ಯ ಸೇವಾ ...ಲಾಖೆಯಲ್ಲಿ 2011ನೇ ಸಾಲಿನಲ್ಲಿ ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಲು ಅನುಮತಿ ನೀಡಿರುವ ಗ್ರೂಪ್-ಎ ಅಧಿಕಾರಿಗಳ ಪಟ್ಟಿಯಲ್ಲಿ ...ಮಸಂಖ್ಯೆ: 12ರ ನಂತರ ಈ ಕೆಳಕಂಡ ಅಧಿಕಾರಿಯ ಹೆಸರನ್ನು ಸೇರಿಸಿ ಓದಿಕೊಳ್ಳತಕ್ಕದ್ದು.

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು, ಪದನಾಮ ಮತ್ತು ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳ	ಜನ್ಮ ದಿನಾಂಕ	ವಯೋನಿವೃತ್ತಿ ಹೊಂದುವ ದಿನಾಂಕ
(12-ಎ)	ಡಾ॥ ವ್ಹಿ. ಎಸ್. ಸೂಗೂರು, ಸಹಾಯಕ ನಿರ್ದೇಶಕರು, ಪಶುವೈದ್ಯಕೀಯ ಆಸ್ಪತ್ರೆ, ಬಂಕಾಪುರ, ಶಿಗ್ಗಾಂವ್ ತಾಲ್ಲೂಕು, ಹಾವೇರಿ ಜಿಲ್ಲೆ	28-07-1951	31-07-2011

ಉಳಿದಂತೆ ದಿನಾಂಕ : 27-11-2010ರ ಅಧಿಸೂಚನೆಯಲ್ಲಿ ಇನ್ನಾವುದೇ ಬದಲಾವಣೆಗಳು ಇರುವುದಿಲ್ಲ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಬಿ.ಕೆ. ಶ್ರೀನಿವಾಸಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಪಶುಸಂಗೋಪನೆ)

ಆರ್. 309

ಆರೋಗ್ಯ ಮತ್ತು ಬಟುಂಬ ಕಲ್ಯಾಣ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಆಕುಕ 47 ಎಂಎಸ್ಎನ್ 2010, ಬೆಂಗಳೂರು, ದಿನಾಂಕ: 21ನೇ ಫೆಬ್ರವರಿ, 2011

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಶ್ರೀ ಹೆಚ್.ಹೆಚ್. ದಾಸೇಗೌಡ, ಉಪನ್ಯಾಸಕರು, ಸರ್ಕಾರಿ ಶುಶ್ರೂಷಾ ಮಹಾವಿದ್ಯಾಲಯ, ಕೋಟೆ, ಬೆಂಗಳೂರು ಇವರಿಗೆ ವೇತನ ಶ್ರೇಣಿ 14,050-25,050 ರ ಗ್ರೂಪ್-ಎ ವೃಂದದ ಶುಶ್ರೂಷಾ ಮಹಾವಿದ್ಯಾಲಯಗಳಲ್ಲಿನ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ತಕ್ಷಣದಿಂದ ಜಾರಿಗೆ ಬರುವಂತೆ ಸ್ಥಾನಪನ್ನ ಪದೋನ್ನತಿ ನೀಡಿ ಮೆಡಿಕಲ್ ಕಾಲೇಜು, ಹಾಸನ ಇಲ್ಲಿ ಖಾಲಿ ಇರುವ ಸಹಾಯಕ ಪ್ರಾಧ್ಯಾಪಕರ ಹುದ್ದೆಗೆ ಸ್ಥಳನಿಯುಕ್ತಿಗೊಳಿಸಿ ನೇಮಕ ಮಾಡಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಐ. ಹೇಮನಾಥ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ (ವೃಂದ ಮತ್ತು ನೇಮಕಾತಿ)

ಪಿ.ಆರ್. 310

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 2 ಸೇಲೋಯು 2011, ಬೆಂಗಳೂರು, ದಿನಾಂಕ: 25ನೇ ಫೆಬ್ರವರಿ, 2011

ಶ್ರೀಮತಿ ಎಸ್.ಎಲ್. ಗಾಯತ್ರಿ ಮತ್ತು ಶ್ರೀಮತಿ ಜಯಶ್ರೀ, ಹಿರಿಯ ತೀರ್ಪು ಬರಹಗಾರರು, ಕರ್ನಾಟಕ ಲೋಕಾಯುಕ್ತ, ಬೆಂಗಳೂರು, ಇವರಿಗೆ ವೇತನ ಶ್ರೇಣಿ ರೂ. 14,050-25,050ರಲ್ಲಿನ ಪತ್ರಾಂಕಿತ ಸಹಾಯಕ (Gazetted Assistant) ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕರ್ನಾಟಕ ಲೋಕಾಯುಕ್ತ ಕಛೇರಿ, ಬೆಂಗಳೂರು ಇಲ್ಲಿ ಖಾಲಿ ಇರುವ ಪತ್ರಾಂಕಿತ ಸಹಾಯಕ ಹುದ್ದೆಗಳಿಗೆ ಇವರನ್ನು ನೇಮಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಪಿ. ಮಾರ್ಕಂಡೇಯ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವಾ ನಿಯಮಗಳು-2)

ಪಿ.ಆರ್. 311

ಅಧಿಸೂಚನೆ

ಸಂಖ್ಯೆ: ಸಿಆಸುಇ 588 ಸಅಸೇ 2010, ಬೆಂಗಳೂರು, ದಿನಾಂಕ: 26ನೇ ಫೆಬ್ರವರಿ, 2011

ಕರ್ನಾಟಕ ಸರ್ಕಾರ ಸಚಿವಾಲಯದ ಸೇವೆಗೆ ಸೇರಿದ ಕೆಳಕಂಡ ಉಪಕಾರ್ಯದರ್ಶಿಗಳಿಗೆ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ವೇತನ ಶ್ರೇಣಿ ₹ 24450-600-26250-675-30300-750-31800ರ ಜಂಟಿ ಕಾರ್ಯದರ್ಶಿ ಹುದ್ದೆಗೆ ಸ್ಥಾನಪನ್ನ ಬಡ್ತಿ ನೀಡಿ ಅವರುಗಳ ಹೆಸರಿನ ಮುಂದೆ ಸೂಚಿಸಿರುವ ಹುದ್ದೆಗಳಲ್ಲಿ ಸ್ಥಳನಿಯುಕ್ತಿಗೊಳಿಸಿ ನೇಮಿಸಲಾಗಿದೆ.

ಕ್ರಮ ಸಂಖ್ಯೆ	ಅಧಿಕಾರಿಯ ಹೆಸರು ಮತ್ತು ಪ್ರಸ್ತುತ ಕರ್ತವ್ಯ ನಿರ್ವಹಿಸುತ್ತಿರುವ ಸ್ಥಳ	ಬಡ್ತಿ ಮೇಲೆ ನೇಮಿಸಲಾದ ಹುದ್ದೆ/ಇಲಾಖೆ
1)	**ಶ್ರೀಮತಿ ಗೀತಾ ರಮೇಶ್,** ಕಂದಾಯ ಇಲಾಖೆ, (ಭೂಮಂಜೂರಾತಿ ಮತ್ತು ಭೂ ಕಂದಾಯ)	ಜಂಟಿ ಕಾರ್ಯದರ್ಶಿ, ಕಂದಾಯ ಇಲಾಖೆ (ಭೂಸ್ವಾಧೀನ, ಪುನರ್ವಸತಿ ಮತ್ತು ಭೂದಾಖಲೆಗಳು)-ಆದೇಶ ಸಂಖ್ಯೆ ಸಿಆಸುಇ 458 ಸಅಸೇ 2008, ದಿನಾಂಕ : 25-02-2011ರಲ್ಲಿ ಉನ್ನತೀಕರಿಸಲಾದ ಹುದ್ದೆ
2)	**ಶ್ರೀ ಎಂ.ಪಿ. ರೂಪನಾರಾಯಣ** ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ	ಜಂಟಿ ಕಾರ್ಯದರ್ಶಿ, ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ – ಆದೇಶ ಸಂಖ್ಯೆ ಸಿಆಸುಇ 458 ಸಅಸೇ 2008, ದಿನಾಂಕ 25-2-2011ರಲ್ಲಿ ಹೊಸದಾಗಿ ಸೃಜಿಸಲಾದ ಹುದ್ದೆ
3)	**ಶ್ರೀಮತಿ ಪಾರ್ವತಿ ಕೇಶವಾಚಾರ್** ಇಂಧನ ಇಲಾಖೆ	ಜಂಟಿ ಕಾರ್ಯದರ್ಶಿ, ಕೃಷಿ ಇಲಾಖೆ – ಆದೇಶ ಸಂಖ್ಯೆ ಸಿಆಸುಇ 458 ಸಅಸೇ 2008, ದಿನಾಂಕ 25-2-2011ರಲ್ಲಿ ಹೊಸದಾಗಿ ಸೃಜಿಸಲಾದ ಹುದ್ದೆ

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ.ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 312

ಅಧಿಸೂಚನೆ

ಸಂಖ್ಯೆ: ಸಿಆಸುಇ 30 ಆಸೇಇ 2011, ಬೆಂಗಳೂರು, ದಿನಾಂಕ: 25ನೇ ಫೆಬ್ರವರಿ, 2011

ಶ್ರೀ ಎಸ್.ಪಿ. ಷಡಾಕ್ಷರಸ್ವಾಮಿ, ಕೆ.ಎ.ಎಸ್. (ಹಿರಿಯ ಶ್ರೇಣಿ) ಅಧಿಕಾರಿ ನಿಯಂತ್ರಕರು, ಕಾನೂನು ಮಾಪನ ಶಾಸ್ತ್ರ ಇಲಾಖೆ, ಬೆಂಗಳೂರು ಇವರನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಕಾರ್ಯದರ್ಶಿ, ಕರ್ನಾಟಕ ಗೃಹ ಮಂಡಳಿ, ಬೆಂಗಳೂರು ಹುದ್ದೆಯ ಹೆಚ್ಚುವರಿ ಪ್ರಭಾರದಲ್ಲಿರಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ಪಿ.ಆರ್. 313

ಅಧಿಸೂಚನೆ

ಸಂಖ್ಯೆ: ಸಿಆಸುಇ 35 ಆಸೇವ 2011, ಬೆಂಗಳೂರು, ದಿನಾಂಕ: 25ನೇ ಫೆಬ್ರವರಿ, 2011

ಶ್ರೀ ಆರ್. ವೆಂಕಟೇಶ್, ಕೆ.ಎ.ಎಸ್. (ಕಿರಿಯ ಶ್ರೇಣಿ), ಉಪವಿಭಾಗಾಧಿಕಾರಿ, ಬಳ್ಳಾರಿ ಉಪವಿಭಾಗ, ಬಳ್ಳಾರಿ ಜಿಲ್ಲೆ, ಇವರನ್ನು ಸಾರ್ವಜನಿಕ ಹಿತದೃಷ್ಟಿಯಿಂದ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ಉಪವಿಭಾಗಾಧಿಕಾರಿ, ಹರಪನಹಳ್ಳಿ ಉಪವಿಭಾಗ, ದಾವಣಗೆರೆ ಜಿಲ್ಲೆ ಹುದ್ದೆಗೆ – ಶ್ರೀ ಕೆ. ಶ್ರೀನಿವಾಸ್ ಇವರ ಸ್ಥಾನದಲ್ಲಿ ವರ್ಗಾಯಿಸಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ಪಿ.ಆರ್. 314

ತಿದ್ದುಪಡಿ ಅಧಿಸೂಚನೆ

ಸಂಖ್ಯೆ: ಸಿಆಸುಇ 60 ಆಸೇಇ 2010, ಬೆಂಗಳೂರು, ದಿನಾಂಕ: 25ನೇ ಫೆಬ್ರವರಿ, 2011

ಸರ್ಕಾರದ ಅಧಿಸೂಚನೆ ಸಂಖ್ಯೆ:ಸಿಆಸುಇ 60 ಆಸೇವ 10 ದಿನಾಂಕ: 04-12-2010ರಲ್ಲಿನ **ಶ್ರೀಮತಿ ಎಂ. ವಿಜಯಕುಮಾರಿ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ** ಎಂಬುದರ ಬದಲಾಗಿ **ಶ್ರೀಮತಿ ಎಂ. ವಿಜಯಕುಮಾರಿ ಶೈಣೈ, ಕೆ.ಎ.ಎಸ್. (ಕಿರಿಯ ಶ್ರೇಣಿ) ಅಧಿಕಾರಿ** ಎಂದು ತಿದ್ದಿ ಓದಿಕೊಳ್ಳತಕ್ಕದ್ದು.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಂ. ವಾಸುದೇವಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-2)

ಪಿ.ಆರ್. 315

ಅಧಿಸೂಚನೆ

ಸಂಖ್ಯೆ: ಸಿಆಸುಇ 210 ಸಿಶಾಸೇ 2010, ಬೆಂಗಳೂರು, ದಿನಾಂಕ: 26ನೇ ಫೆಬ್ರವರಿ, 2011

2011ನೇ ಸಾಲಿನಲ್ಲಿ 60 ವರ್ಷ ವಯೋಮಿತಿಯು ಪೂರ್ಣಗೊಳ್ಳಲಿರುವ ಕರ್ನಾಟಕ ಸರ್ಕಾರ ಸಚಿವಾಲಯದ ಈ ಕೆಳಕಂಡ ಶಾಖಾಧಿಕಾರಿಗಳು ಅವರುಗಳ ಹೆಸರಿನ ಮುಂದೆ ಸೂಚಿಸಿರುವ ದಿನಾಂಕಗಳ ಅಪರಾಹ್ನದಿಂದ ಜಾರಿಗೆ ಬರುವಂತೆ ಸೇವೆಯಿಂದ ನಿವೃತ್ತರಾಗಲಿರುವರು.

ಕ್ರಮ ಸಂಖ್ಯೆ	ಶಾಖಾಧಿಕಾರಿಯ ಹೆಸರು ಮತ್ತು ಕಾರ್ಯನಿರ್ವಹಿಸುತ್ತಿರುವ ಇಲಾಖೆ	ಜನ್ಮ ದಿನಾಂಕ	ನಿವೃತ್ತರಾಗಲಿರುವ ದಿನಾಂಕ
1)	**ಹೆಚ್. ಮೈಲಾರಪ್ಪ,** ಸಿಆಸು ಇಲಾಖೆ (ರಾಜ್ಯ ಶಿಷ್ಟಾಚಾರ-ಅಂತರರಾಷ್ಟ್ರೀಯ ವಿಮಾನ ನಿಲ್ದಾಣ)	15-02-1951	28-02-2011
2)	**ಬಿ.ಎನ್. ವೃಷಭೇಂದ್ರಪ್ಪ,** ಮುಖ್ಯಮಂತ್ರಿಯವರ ಸಚಿವಾಲಯ	16-04-1951	30-04-2011
3)	**ಎ. ನರೇಂದ್ರ,** ಸಿಆಸು ಇಲಾಖೆ, (ಕಾರ್ಯಕಾರಿ ವಿಶೇಷಾಧಿಕಾರಿ)	05-06-1951	30-06-2011

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್.ಎನ್. ಕೃಷ್ಣಮೂರ್ತಿ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸಿಬ್ಬಂದಿ)

ಪಿ.ಆರ್. 316

ಒಳಾಡಳಿತ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಒಇ 15 ಪೊಸಿಲಿ 2011, ಬೆಂಗಳೂರು, ದಿನಾಂಕ: 25ನೇ ಫೆಬ್ರವರಿ, 2011

ರಾಜ್ಯ ಪೊಲೀಸ್ ಇಲಾಖೆಯ ನ್ಯಾಯ ವಿಜ್ಞಾನ ಪ್ರಯೋಗಾಲಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಶ್ರೀ ಬಿ. ನಂಜುಂಡಪ್ಪ, ಉಪ ನಿರ್ದೇಶಕರು 2011ನೇ ಸಾಲಿನಲ್ಲಿ ಅವರ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಂದು 60 ವರ್ಷಗಳ ವಯೋಮಿತಿಯನ್ನು ಪೂರ್ಣಗೊಳಿಸಲಿದ್ದು, ಸರ್ಕಾರಿ ಸೇವೆಯಿಂದ ವಯೋ ನಿವೃತ್ತಿಯನ್ನು ಹೊಂದಲಿದ್ದಾರೆ.

ಕ್ರಮ ಸಂಖ್ಯೆ	ಅಧಿಕಾರಿಗಳ ಹೆಸರು ಮತ್ತು ಪದನಾಮ ಮತ್ತು ಕಾರ್ಯನಿರ್ವಹಿಸುತ್ತಿರುವ ಸ್ಥಳ	ಜನ್ಮ ದಿನಾಂಕ	ವಯೋ ನಿವೃತ್ತಿ ಹೊಂದಲಿರುವ ದಿನಾಂಕ
1	ಶ್ರೀ ಬಿ. ನಂಜುಂಡಪ್ಪ, ಉಪ ನಿರ್ದೇಶಕರು, ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ, ಮೈಸೂರು	13-03-1951	31-03-2011

ಶ್ರೀ ಬಿ. ನಂಜುಂಡಪ್ಪ, ಉಪ ನಿರ್ದೇಶಕರು, ಪ್ರಾದೇಶಿಕ ನ್ಯಾಯ ವಿಜ್ಞಾನ ಪ್ರಯೋಗಾಲಯ, ಮೈಸೂರು ರವರ ವಿರುದ್ಧ ಇಲಾಖಾ ವಿಚಾರಣೆ ಬಾಕಿಯಿದ್ದು ಸರ್ಕಾರಕ್ಕೆ ಬರಬೇಕಾದ ಯಾವುದೇ ಬಾಕಿಯನ್ನು ಅವರ ನಿವೃತ್ತಿ ಉಪದಾನದಲ್ಲಿ ತಡೆಹಿಡಿಯುವ ಷರತ್ತಿಗೊಳಪಟ್ಟಿರುತ್ತದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಎನ್. ರವಿಪ್ರಕಾಶ್,
ಸರ್ಕಾರದ ಅಧೀನ ಕಾರ್ಯದರ್ಶಿ,
ಒಳಾಡಳಿತ ಇಲಾಖೆ (ಪೊಲೀಸ್ ಸೇವೆಗಳು)

ಪಿ.ಆರ್. 317

ಕಂದಾಯ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಂಇ 3 ಮುನೋಸೇ(1) 2011, ಬೆಂಗಳೂರು, ದಿನಾಂಕ: 18ನೇ ಫೆಬ್ರವರಿ, 2011

ನೋಂದಣಿ ಮತ್ತು ಮುದ್ರಾಂಕ ಇಲಾಖೆಯಲ್ಲಿ ಸೇವೆ ಸಲ್ಲಿಸುತ್ತಿರುವ ಈ ಕೆಳಕಾಣಿಸಿದ ಗ್ರೂಪ್-ಎ ಮತ್ತು ಗ್ರೂಪ್-ಬಿ ವರ್ಗಗಳ ಅಧಿಕಾರಿಗಳನ್ನು 2011ನೇ ಸಾಲಿನಲ್ಲಿ (ದಿನಾಂಕ : 31-01-2011 ರಿಂದ 31-12-2012ರವರೆಗೆ) ಅವರ ಹೆಸರಿನ ಮುಂದೆ ನಮೂದಿಸಿರುವ ದಿನಾಂಕದಿಂದ ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಲಿದ್ದಾರೆ ಎಂಬ ಮಾಹಿತಿಯನ್ನು ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 96(2)ರ ಪ್ರಕಾರ ಪ್ರಕಟಿಸಲಾಗಿದೆ.

ಸದರಿಯವರುಗಳ ವಿರುದ್ಧ ಇಲಾಖಾ ವಿಚಾರಣೆ ಬಾಕಿ ಇದ್ದಲ್ಲಿ ಹಾಗೂ ಸರ್ಕಾರಕ್ಕೆ ಇವರುಗಳಿಂದ ಯಾವುದೇ ರೀತಿಯ ಲೋಕಾಯುಕ್ತ ವಿಚಾರಣೆ, ಕ್ರಿಮಿನಲ್ ಪ್ರಕರಣ ಬಾಕಿ ಇದ್ದಲ್ಲಿ ಇವರುಗಳೇ ಪೂರ್ಣ ಜವಾಬ್ದಾರರೆಂದು ಹಾಗೂ ಇವರ ಮೇಲೆ ಲೆಕ್ಕ ಪರಿಶೋಧನಾ ವರದಿಯಲ್ಲಿ ಕ್ರಮ ಕೈಗೊಳ್ಳಲು ಆಡಿಟ್ ಪ್ಯಾರಾ ಬಾಕಿ ಇದ್ದಲ್ಲಿ ಇವರುಗಳಿಗೆ ತಾತ್ಕಾಲಿಕ ಪಿಂಚಣಿ ಮಾತ್ರ ಬಿಡುಗಡೆ ಮಾಡುವಂತೆ ಆದೇಶಿಸಲಾಗಿದೆ.

ಕ್ರಮ ಸಂಖ್ಯೆ	ಅಧಿಕಾರಿ/ನೌಕರರ ಹೆಸರು	ಪದನಾಮ ಮತ್ತು ಕೆಲಸ ನಿರ್ವಹಿಸುತ್ತಿರುವ ಕಛೇರಿ	ಜನ್ಮ ದಿನಾಂಕ	ವಯೋ ನಿವೃತ್ತಿ ಹೊಂದುವ ದಿನಾಂಕ
1	2	3	4	5
ಹಿರಿಯ ಉಪನೋಂದಣಾಧಿಕಾರಿ-ಗ್ರೂಪ್ ಬಿ				
1	ಶ್ರೀಮತಿ ಜಿ.ಎನ್. ಸಿದ್ದನಂಜಮ್ಮ	ಹಿರಿಯ ಉಪ ನೋಂದಣಾಧಿಕಾರಿ, ಕೇಂದ್ರ ಕಛೇರಿ, ಬೆಂಗಳೂರು	06-07-1951	31-07-2011

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಟಿ.ಕೆ. ರಾಮಚಂದ್ರ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕಂದಾಯ ಇಲಾಖೆ (ನೋಂದಣಿ ಮತ್ತು ಮುದ್ರಾಂಕ)

ಪಿ.ಆರ್. 318

HIGH COURT OF KARNATAKA

NOTIFICATION

No. HCE. 1241/2010, Bangalore, Dated 23rd February, 2011

Sri B.N. Sonnappa Reddy, Court Officer of this office is permitted to retire from service on attaining the age of superannuation w.e.f. the afternoon of 28-02-2011 and he will be relieved of his duties in this office on the afternoon of 28-02-2011.

By Order of Hon'ble the Chief Justice,

K.S. MUDAGAL,
REGISTRAR (JUDICIAL)

P.R. 319

NOTIFICATION

No. HCE. 1284/2010, Bangalore, Dated 23rd February, 2011

Sri M.N. Nadagoudar, Assistant Registrar of this office is permitted to retire from service on the afternoon of 31-03-2011 on attaining the age of superannuation and he will be relieved of his duties in this office on the afternoon of 31-03-2011

By Order of Hon'ble the Chief Justice,

R.B. BUDIHAL,
REGISTRAR GENERAL

P.R. 320

NOTIFICATION

No. HCE. 1279/2010, Bangalore, Dated 24th February, 2011

Smt. K.V. Suvarnamba, Section Officer of this office is permitted to retire from service voluntarily w.e.f. the afternoon of 28-02-2011, under Rule 285(1)(a) of KCSRs.

By Order of Hon'ble the Chief Justice,

K.S. MUDAGAL,
REGISTRAR (JUDICIAL)

P.R. 321

ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಕಸಂವಾಪ್ರ 2 ಪ್ರವಾನಿ 2011, ಬೆಂಗಳೂರು, ದಿನಾಂಕ: 01ನೇ ಮಾರ್ಚ್, 2011

ಸರ್ಕಾರದ ಅಧಿಸೂಚನೆ ಸಂಖ್ಯೆ: ಡಿಪಿಎಆರ್ 674 ಎಸ್ಎಎಸ್ 2010, ದಿನಾಂಕ: 30-12-2010ರಲ್ಲಿ ಶ್ರೀ ಶಿವರಾಂ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆ, ಇವರನ್ನು ಡಾ॥ ಹೆಚ್. ಭಾಸ್ಕರ್, ಭಾ.ಆ.ಸೇ. ಇವರ ವರ್ಗಾವಣೆಯಿಂದ ತೆರವಾದ ಸ್ಥಾನದಲ್ಲಿ ನೇಮಿಸಿದ್ದು, ತತ್ಸಂಬಂಧದಲ್ಲಿ ಶ್ರೀ ಶಿವರಾಂ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿ, ಸಾರ್ವಜನಿಕ ಉದ್ದಿಮೆಗಳ ಇಲಾಖೆ ಇವರನ್ನು ಡಾ॥ ಹೆಚ್. ಭಾಸ್ಕರ್ ಅವರ ಬದಲಿಗೆ ಕರ್ನಾಟಕ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮ ನಿಯಮಿತದ, ನಿರ್ದೇಶಕರ ಮಂಡಳಿಗೆ ನಿರ್ದೇಶಕರನ್ನಾಗಿ ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ,
ಎಸ್. ನಾರಾಯಣಪ್ಪ,
ಸರ್ಕಾರದ ಅಧೀನ ಕಾರ್ಯದರ್ಶಿ,
ಕನ್ನಡ ಮತ್ತು ಸಂಸ್ಕೃತಿ, ವಾರ್ತಾ ಮತ್ತು ಪ್ರವಾಸೋದ್ಯಮ ಇಲಾಖೆ

ಪಿ.ಆರ್. 322

ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಲಾ 127 ಎಲ್ಎಜಿ 2010, ಬೆಂಗಳೂರು, ದಿನಾಂಕ: 01ನೇ ಮಾರ್ಚ್, 2011

ಕರ್ನಾಟಕ ಕಾನೂನು ಅಧಿಕಾರಿಗಳ (ನೇಮಕಾತಿ ಮತ್ತು ಸೇವಾ ಷರತ್ತುಗಳು) ನಿಯಮಗಳ 1977ರಲ್ಲಿನ ಷರತ್ತಿಗಳಿಗೊಳಪಟ್ಟು ದಿನಾಂಕ: 19-07-2010ರಿಂದ ಮುಂದಿನ ಆದೇಶದವರೆಗೆ ಅಥವಾ ಹೊಸದಾಗಿ ಸರ್ಕಾರಿ ವಕೀಲರನ್ನು ನೇಮಿಸುವವರೆಗೆ ಇವೆರಡರಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ, ಶ್ರೀ ಎಲ್.ಬಿ. ಚೌಗಲೆ, ವಕೀಲರು, ಇವರನ್ನು ಬೆಳಗಾವಿ ಜಿಲ್ಲೆಯ ರಾಯಭಾಗ ತಾಲ್ಲೂಕಿನ ಅಪರ ಸರ್ಕಾರಿ ವಕೀಲರ ಹುದ್ದೆಯಲ್ಲಿ ಮುಂದುವರೆಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಸಯ್ಯದ್ ಅಬ್ದುಲ್ ನಜೀರ್,
ಸರ್ಕಾರದ ಅಧೀನ ಕಾರ್ಯದರ್ಶಿ (ಆಡಳಿತ-I),
ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳ ಇಲಾಖೆ.

ಪಿ.ಆರ್. 323

ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಪಸಂಮೀ 23 ಮೀಇಸೇ 2011, ಬೆಂಗಳೂರು, ದಿನಾಂಕ: 03ನೇ ಮಾರ್ಚ್, 2011

ಶ್ರೀ ಕೆ. ಗಣಪತಿಭಟ್, ಮೀನುಗಾರಿಕೆ ಜಂಟಿ ನಿರ್ದೇಶಕರು, ಪ್ರಸ್ತುತ ಆಡಳಿತ ನಿರ್ದೇಶಕರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲಾ ಸಹಕಾರಿ ಮೀನು ಮಾರಾಟ ಫೆಡರೇಷನ್ ಲಿಮಿಟೆಡ್, ಮಂಗಳೂರು ಇಲ್ಲಿ ನಿಯೋಜನೆ ಮೇಲೆ ಕಾರ್ಯನಿರ್ವಹಿಸುತ್ತಿರುವ ಇವರ ಸೇವೆಯನ್ನು ಹಿಂದಕ್ಕೆ ಪಡೆದು ಈ ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಹಾಲಿ ಖಾಲಿ ಇರುವ ಯೋಜನಾ ಸಮನ್ವಯಾಧಿಕಾರಿ, ಮಲ್ಪೆ ಮತ್ತು ಹೊನ್ನಾವರ ಮೀನುಗಾರಿಕೆ ಬಂದರುಗಳ ಯೋಜನೆ, ಮಲ್ಪೆ ಹುದ್ದೆಗೆ ವರ್ಗಾಯಿಸಿ ನೇಮಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಡಿ.ಎಂ. ರಾಜಣ್ಣ,
ಸರ್ಕಾರದ ಅಧೀನ ಕಾರ್ಯದರ್ಶಿ,
ಪಶುಸಂಗೋಪನೆ ಮತ್ತು ಮೀನುಗಾರಿಕೆ ಇಲಾಖೆ (ಮೀ).

ಪಿ.ಆರ್. 324

PERSONNEL AND ADMINISTRATIVE REFORMS SECRETARIAT

NOTIFICATION

No: DPAR 99 SAS 2011, Bangalore, Dated 3rd March, 2011

The Additional Deputy Commissioner, Chitradurga District, Chitradurga is placed in additional charge of the post of ***Deputy Commissioner, Chitradurga District, Chitradurga*** with effect from 21-02-2011 and until further orders in the existing vacancy.

By Order and in the Name of the Governor of Karnataka,
ASHOK.P. ATRE,
Under Secretary to Government (I/C),
DP & AR (Services-I)

P.R. 325

NOTIFICATION

No: DPAR 100 SAS 2011, Bangalore, Dated 3rd March, 2011

The Secretary to Government, Revenue Department, Bangalore, is placed in additional charge of the post of Principal Secretary to Government, Revenue Department, Bangalore, with immediate effect and until further orders vice Sri V. Madhu, IAS. retiring voluntarily w.e.f. 03-03-2011 (Afternoon).

The Principal Secretary to Government, Commerce and Industries Department, Bangalore, is placed in additional charge of the post of Principal Secretary to Government, Infrastructure Development Department, Bangalore, with immediate effect and until further orders vice Sri V. Madhu, IAS, retiring voluntarily w.e.f. 03-03-2011 (Afternoon).

By Order and in the Name of the Governor of Karnataka,
ASHOK.P. ATRE,
Under Secretary to Government (I/C),
DP & AR (Services-I)

P.R. 326

ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಸಚಿವಾಲಯ

ಅಧಿಸೂಚನೆ

ಸಂಖ್ಯೆ: ಸಿಆಸುಇ 36 ಸಅಸೇ 2011, ಬೆಂಗಳೂರು, ದಿನಾಂಕ: 03ನೇ ಮಾರ್ಚ್, 2011

ಕರ್ನಾಟಕ ಸರ್ಕಾರ ಸಚಿವಾಲಯದ ಕೃಷಿ ಇಲಾಖೆಯಲ್ಲಿನ ವೇತನ ಶ್ರೇಣಿ ರಹಿತ **"ಅಪರ ಕಾರ್ಯದರ್ಶಿ (ಆಹಾರ ಸಂಸ್ಕರಣೆ)"** ಹುದ್ದೆಯ ಪದನಾಮವನ್ನು ತಕ್ಷಣದಿಂದ ಜಾರಿಗೆ ಬರುವಂತೆ ಹಾಗೂ ಮುಂದಿನ ಆದೇಶದವರೆಗೆ **"ಅಪರ ಕಾರ್ಯದರ್ಶಿ (ಕೃಷಿ)"** ಎಂದು ಮರು ಪದನಾಮಗೊಳಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ ಮತ್ತು ಅವರ ಹೆಸರಿನಲ್ಲಿ,
ಎ. ಆರ್. ವಿಜಯಾನಂದ ಶರ್ಮ,
ಸರ್ಕಾರದ ಅಧೀನ ಕಾರ್ಯದರ್ಶಿ,
ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3)

ಪಿ.ಆರ್. 327

KA / BG-GPO/2515/WPP-47/2009-2011

ಕರ್ನಾಟಕ ರಾಜ್ಯಪತ್ರ

ಅಧಿಕೃತವಾಗಿ ಪ್ರಕಟಿಸಲಾದುದು

ಸಂಪುಟ ೧೪೬ | ಬೆಂಗಳೂರು, ಗುರುವಾರ, ಮಾರ್ಚ್ ೨೪, ೨೦೧೧ (ಚೈತ್ರ ೩ ಶಕ ವರ್ಷ ೧೯೩೨) | ಸಂಚಿಕೆ ೧೨

ಭಾಗ–೩

ಸರ್ಕಾರದ ಆಯಾ ಇಲಾಖೆಗಳ ಮುಖ್ಯಸ್ಥರ ಮತ್ತು ಸ್ಥಳೀಯ ಪ್ರಾಧಿಕಾರಿಗಳಿಗೆ ಸಂಬಂಧಿಸಿದ ಅಧಿಸೂಚನೆಗಳು

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ಪ್ರಸರಣ ಭವನ, 2ನೇ ಮಹಡಿ, ಸಂತೆಪೇಟೆ, ಬಿ.ಎಂ. ರಸ್ತೆ, ಹಾಸನ–573201

ಪರಿಷ್ಕೃತ ಪ್ರಕಟಣೆ

ಸಂಖ್ಯೆ: ಕಾನಿಇಂ(ಕ)/ಸಕಾನಿಇಂ(ವಿ)–2/ಎಫ್–139/3954, ದಿನಾಂಕ:28ನೇ ಫೆಬ್ರವರಿ, 2011

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ವಿದ್ಯುತ್‌ಚ್ಛಕ್ತಿ ಸರಬರಾಜು ಅಧಿನಿಯಮ 2003ರ ಅನ್ವಯ ಯೋಜನೆ ಒಂದನ್ನು ರೂಪಿಸಿದ್ದು, ಯೋಜನೆಯ ವಿವರಗಳನ್ನು ಸೆಕ್ಷನ್ 67ರ ಅನ್ವಯ ಸಮಸ್ತ ಸಾರ್ವಜನಿಕರ ತಿಳುವಳಿಕೆಗಾಗಿ ಈ ಕಛೇರಿ ಪ್ರಕಟಣೆ ಸಂಖ್ಯೆ: ಕಾನಿಇಂ(ಕ)/ಸಕಾನಿಇಂ(ವಿ)–1/ಕ–139/4248–52 ದಿನಾಂಕ:13.02.2008 ಅನ್ನು ದಿನಾಂಕ:17.02.2008ರ ಟೈಮ್ಸ್ ಆಫ್ ಇಂಡಿಯ ಮತ್ತು ಉದಯವಾಣಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿದ್ದ ಈ ಯೋಜನೆಗಳ ವಿವರಗಳು ಕೆಳಕಂಡಂತೆ ಇರುತ್ತದೆ.

ಕೆಲಸದ ಹೆಸರು: ಎನ್.ಪಿ.ಸಿ.ಎಲ್. ರವರಿಂದ ನಂದಿಕೂರು (ಉಡುಪಿ ಜಿಲ್ಲೆ) ನಿಂದ ಶಾಂತಿಗ್ರಾಮದವರೆಗೆ (ಹಾಸನ ಜಿಲ್ಲೆ) 400 ಕೆ.ವಿ. ಪ್ರತ್ಯೇಕವಾದ ಜೋಡಿ ವಿದ್ಯುತ್ ಪ್ರಸರಣ ಮಾರ್ಗ–1ರ ನಿರ್ಮಾಣ.

ಪ್ರಮುಖ ಲಕ್ಷಣಗಳು: ಕರ್ನಾಟಕದಲ್ಲಿ ಹೆಚ್ಚುತ್ತಿರುವ ವಿದ್ಯುತ್ ಬೇಡಿಕೆಯನ್ನು ಪೂರೈಸಲು ಮತ್ತು ವಿದ್ಯುತ್ ಸಮತೋಲನವನ್ನು ಕಾಪಾಡಲು ನಾಗಾರ್ಜುನ ಪವರ್ ಕಾರ್ಪೋರೇಷನ್ ಲಿಮಿಟೆಡ್ ನಿಂದ ಉತ್ಪನ್ನವಾದ ವಿದ್ಯುತ್ ಅನ್ನು 400 ಕೆ.ವಿ. ಪ್ರಸರಣ ಮಾರ್ಗದಿಂದ ಪಡೆಯುವುದು.

ಅಂದಾಜು ವೆಚ್ಚ: ರೂ.523 ಕೋಟಿಗಳು.

ದಿನಾಂಕ:17.02.2008ರ ಟೈಮ್ಸ್ ಆಫ್ ಇಂಡಿಯ ಮತ್ತು ಉದಯವಾಣಿ ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗಿದ್ದ ಪ್ರಕಟಣೆಯಲ್ಲಿ 400 ಕೆ.ವಿ. ಪ್ರಸ್ತಾಪಿತ ಮಾರ್ಗವು ಹಾದುಹೋಗುವ ಗ್ರಾಮಗಳ ಹೆಸರುಗಳನ್ನು ಪ್ರಕಟಿಸಲಾಗಿದ್ದು ಈ ಗ್ರಾಮಗಳ ನಡುವೆ ಬರುವ ಕೆಲವು ಗ್ರಾಮಗಳ ಹೆಸರುಗಳು ಬಿಟ್ಟುಹೋಗಿರುವುದರಿಂದ ಮತ್ತೊಮ್ಮೆ ಎಲ್ಲಾ ಗ್ರಾಮಗಳ ಹೆಸರುಗಳನ್ನು ಪ್ರಕಟಿಸಲಾಗಿದೆ.

ಹಾದು ಹೋಗುವ ಗ್ರಾಮಗಳ ಹೆಸರು: ಎಲ್ಲೂರು, ನಂದಿಕೂರು, ಕಾಂಜಾರಾಕಟ್ಟೆ, ಪಾಲಿಮಾರು, ಇನ್ನ, ಮುಂಡುಕೂರ, ಮುಲ್ಲಡ್ಕ, ಬೋಳ, ಪಾಲಡ್ಕ, ಕಡಂದಲೆ, ಕಾಂತವಾರ, ಬೆಳ್ವಾಯಿ, ಪೆಡುಮರ್ನಾಡು, ಮೂಡುಮರ್ನಾಡು, ಪಡುಕೊಣಜೆ, ಮೂಡುಕೊಣಜೆ, ವಲ್ಪಡೆ, ಶಿರ್ತಡ, ಕಾಶಿಪಟ್ಟಣ, ಪೆರೋಡಿ (ಮರೋಡಿ), ಸಾವ್ಯ, ಅಂಡಿಂಜೆ, ಕೊಕ್ರಡಿ, ಕುಡ್ಯಾಡಿ, ಪೀಳ್ಯ, ಬಡಗಕರಂದೂರು, ಬೆಳಂಜ, ತೆಂಕಕರಂದೂರು, ಮುಂಡೂರು, ಲೈಲ, ನಾಡ, ಮೇಲಂತಬೆಟ್ಟು, ಸೂರ್ಯ, ಇಂದು ಬೆಟ್ಟು, ಮುಡಂಜೆ, ಚಿಬಿದ್ರೆ, ತೋಟತಾಡಿ, ನೇರಿಯ, ಮುಂಡುಕಲ್ಲ, ಅಂಬಾಟೆಮಲೆ, ಗಾಳಿಗುಡ್ಡ, ದೇವರಮನೆ, ಗುತ್ತಿ, ಹಳ್ಳಿಬೈಲು, ಪಟ್ಟದೂರು, ದಾರದಹಳ್ಳಿ, ಹಾಲೂರು, ಉಂಬಲಗೂಡು, ಕೋಗಿಲೆ, ಹೆಸಗೊಡು, ಕೊಟ್ರಕೆರೆ, ಹ್ಯಾರಗುಡ್ಡ, ತ್ರಿಪುರ, ಬಕ್ಕಿ, ಜೋಗಣ್ಣಕೆರೆ, ಅಂಗಡಿ, ಹೊಯ್ಸಳಲು, ಜಿ. ಅಗ್ರಹಾರ, ಜಿ. ಹೊಸಹಳ್ಳಿ, ಮರ್ಸಿನ ಕೊಪ್ಪಲು ಸಮದಲೆ, ಮಲಸವಾರ, ಬಾಳಗುಳಿ, ಮಾದೇನಹಳ್ಳಿ, ಮರಸು, ಹಸಿರು ವಡ್ಡ, ಉತ್ತೋಳಲು, ವಾಟೇಹಳ್ಳಿ, ಅರೇಹಳ್ಳಿ, ಲಿಂಗ್ಲಾಪುರ, ಉದೇವಾರ, ಕಲ್ಲಹಳ್ಳಿ, ಬೆಳಗೋಡು, ಹೆಬ್ಬನಹಳ್ಳಿ, ಕಿರುವಾಲೆ, ಮೂಗ್ಲಿ, ಸಂಕ್ಲಾಪುರ, ಹೆಳುಮೆ, ಮಂಜಲಗೂಡು, ಮಡಬಲು, ಕಿತ್ತಗನಹಳ್ಳಿ, ಬೆಳ್ಳೂರು, ಮುರುಡೂರು, ಕೆಂಚನಹಳ್ಳಿ ಪುರ, ತೊಗರನಹಳ್ಳಿ, ಕೆಂಚನಹಳ್ಳಿ, ಬೆಕ್ಕೂರು ಕಾಲೋನಿ, ಬೈರಾಪುರ, ಹೊಸೂರು, ಚನ್ನಾಪುರ, ರಾಯಸಮುದ್ರ, ಕಿರಿಗಡಲು, ಮಲ್ಲಿಗನಹಳ್ಳಿ ಕಡ್ಲು, ಕಟ್ಟೆ ಹೊಸಹಳ್ಳಿ, ಶಂಕರನಹಳ್ಳಿ, ಬೈಲಗುಂದ, ಗೋಳೇನಹಳ್ಳಿ,

ದೊಡ್ಡಬಾಗನಹಳ್ಳಿ, ಒಂಟಿಮನೆ, ಅಗಿಲೆ, ಕಿತ್ತಾನೆಗಡಿ, ಅಂಬುಗ, ಎ.ಗುಡುಗನಹಳ್ಳಿ, ಚಿಗಳ್ಳಿ, ಮರ್ಕುಲಿ, ದಡದಹಳ್ಳಿ, ಬುರ್ಡಾಲ್ ಬೋರೆ ಫಾರೆಸ್ಟ್, ಉಪ್ಪಾರಹೊಸಹಳ್ಳಿ, ಪಿರಮೇನಹಳ್ಳಿ, ರಂಗನಾಥಪುರ, ಶಾಂತಿಗ್ರಾಮ, ಲಕ್ಷ್ಮೀಪುರ, ಕಿತ್ತಾನೆ, ಜಕ್ಕನಹಳ್ಳಿ, ಚವಲಗೆರೆ, ಬೆಡಚವಳ್ಳಿ.

ಮೇಲೆ ತಿಳಿಸಿರುವ ಯೋಜನೆಯನ್ನು ಕಾರ್ಯಗತಗೊಳಿಸಲು ಕವಿಪ್ರನಿನಿಯು ಭಾರತೀಯ ಟೆಲಿಗ್ರಾಫ್ ಕಾಯಿದೆ 1885 (13/1885)ರ ಪರಿಚ್ಛೇದ-(III)ರ ಅನ್ವಯ ಟೆಲಿಗ್ರಾಫ್ ಅಧಿಕಾರಿಗಳು ಹೊಂದಿರುವ ಎಲ್ಲಾ ಅಧಿಕಾರಗಳನ್ನು ಹೊಂದಿರುತ್ತದೆ. ಸದರಿ ಯೋಜನೆಯ ಬಗ್ಗೆ ಯಾವುದೇ ಆಕ್ಷೇಪಣೆಗಳಿದ್ದರೆ ಅಥವಾ ವಿಸಂಗತಿಗಳು ಇದ್ದಲ್ಲಿ ಅವುಗಳನ್ನು ಪರಿಗಣಿಸಲು ಅಧೀಕ್ಷಕ ಇಂಜಿನಿಯರ್ (ವಿ), ಪ್ರಸರಣ (ಕಾ ಮತ್ತು ನಿ) ವೃತ್ತ, ಕ.ವಿ.ಪ್ರ.ನಿ.ನಿ., ಸಂತೆಪೇಟೆ, ಬಿ.ಎಂ. ರಸ್ತೆ, ಹಾಸನ ಇವರ ಕಛೇರಿಗೆ ಪ್ರಕಟಣೆಯ ದಿನಾಂಕದಿಂದ 15 ದಿನಗಳ ಒಳಗಾಗಿ ಸಲ್ಲಿಸತಕ್ಕದ್ದು.

ಅಧೀಕ್ಷಕ ಅಭಿಯಂತರರು,

ಪ್ರಸರಣ (ಕಾ ಮತ್ತು ನಿ) ವೃತ್ತ, ಕ.ವಿ.ಪ್ರ.ನಿ.ನಿ, ಹಾಸನ.

ಪಿಡಿ-26

NAKSHATRA DEVELOPERS BANGALORE PRIVATE LIMITED

Regd Offi:46: 1^{st} Floor, Mayur Nivas, 4^{th} Main, 3^{rd} Cross, Chamarajapet, Bangalore-560 018

PUBLIC NOTICE

Notice is hereby given for general information that the members of the Nakshatra Developers Bangalore Private Limited at an Extraordinary General Meeting of the company held on 30.12.2010 at its registered office of the Company at Bangalore, have passed the following Special Resolution to wind up the above Company voluntarily.

"RESOLVED THAT pursuant to Section 484(1)(b) of the Companies Act, 1956 and based on the declaration made by the Board of Directors Dated 30^{th} December, 2010 and delivered to the Registrar of Companies under Section 488 of the Companies Act, 1956, stating that the Company would be able to pay all its debts in full within a period of one year from the date of declaration hereof, the Company having office at 46, 1^{st} Floor, Mayur Nivas, 4^{th} Main, 3^{rd} Cross, Chamrajpet, Bangalore-560 018 be wound up voluntarily.

RESOLVED FURTHER that Mr. Manjunatha M. Reddy be and is hereby appointed as the Liquidator of the Company pursuant to the provisions of Section 490 of the Companies Act, 1956 with a remuneration of Rs.50,000/- (Rupees Fifty Thousand only) in addition to his costs, charges and expenses."

Place: Bangalore

Date:30.12.2010

BY ORDER OF THE BOARD

For Nakshatra Developers, B'lore Pvt.Ltd.,

M.C. VENUGOPAL

DIRECTOR.

Form No.151

(See Rule 315)

Members Voluntary Winding up

Notice of Apartments of Liquidator Pursuant to Section 516

Name of the Company : Nakshatra Developers Bangalore Private Limited

Nature of Business : Construction Company

Address of Registered Office : 46, 1^{st} Floor, Mayur Nivas, 4^{th} Main, 3^{rd} Cross, Chamrajpet, Bangalore-560 018

Name and Address of Liquidator: Mr. Manjunatha M. Reddy

#9, Manjushree, 3^{rd} Floor, West Link Road, Malleswaram, Bangalore-560 003.

Date of Appointment : 30^{th} December, 2010

By whom appointed : Members in their meeting held on 30^{th} December, 2010

Date:07.03.2011

Place: Bangalore

PD-25

BY ORDER OF THE BOARD

For Nakshatra Developers, B'lore Pvt.Ltd.,

M.C. VENUGOPAL

Director.

KARNATAKA SECONDARY EDUCATION EXAMINATION BOARD

6^{TH} CROSS, MALLESWARAM, BANGALORE-560 003

NOTIFICATION

No.A8.PU.A.PRA.13/2010-11, Dated:21.02.2011

In exercise of the powers conferred by section 26 of the Karnataka Secondary Education Examination Board Act, 1966 (Karnataka Act No.16 of 1966), after obtaining the approval of Government of Karnataka under section 27 there of in their letter

No.ED 169 SLB 2010, Dated:18.02.2011 the Karnataka Secondary Education Examination Board hereby makes the following regulations further to amend the Karnataka Secondary Education Examination Board first Regulations, 1966, namely:-

1. Title and Commencement: 1. These regulations may be called the Karnataka Secondary Education Examination Board (Amendment) Regulations, 2011.

2. They shall come into force with effect from the first day of April, 2011.

2. Amendment of regulation 37: In the Karnataka Secondary Education Examination Board First Regulations, 1966 (hereinafter referred to as the said regulations) in regulation 37, after sub-regulation (3), the following proviso, shall be inserted, namely:-

"Provided that, if the candidate fails in any one or more subjects he shall re-appear in such subjects as the conditions laid down under regulation 38A".

3. Amendment of regulation 38: After regulation 38 of the said regulations, the following shall be inserted, namely:-

"38A candidate who has appeared for the SSLC Examination under regulation 37, 38 or 39 and who does not complete or pass the examination in the first attempt, shall complete the SSLC examination within six consecutive attempts including the first appearance, failing which the marks scored in the subjects for which the candidate had appeared and passed shall stand cancelled and the marks secured in those previous attempts in all such subjects shall be deemed to have been impounded, and he shall re-appear for the entire examination of all paper as fresh as a private candidate as per the provisions under regulation 43.

Provided that in cases where the candidate cannot take up the examination in consecutive attempts for reasons like, illness, hospitalization or not in station etc., but the total number of attempts shall not exceed six consecutive Examinations commencing from the first examination and such candidates may be allowed to appear for the examination.

Provided further that in case a candidates who have already taken the SSLC Examination prior to March-2010 and who have not completed the examination, the total number of six consecutive attempts shall commence from the SSLC Examination of April-2011"

4. Amendment of regulation 39: In regulation 39 of the said regulations after clause (iii), the following proviso shall be inserted, namely:-

"Provided that, if the candidate fails in any one or more subjects he shall re-appear for such subjects as per the conditions laid down in regulation 38A".

D. VENKATESHAIAH

PD-17 Director of Public Instruction, Examinations.

COMMERCIAL TAXES DEPARTMENT

PROCEEDINGS OF THE COMMISSIONER OF COMMERCIAL TAXES, (KARNATAKA), BANGALORE-CLARIFICATION UNDER SECTION 59(4) OF THE KARNATAKA VALUE ADDED TAX ACT, 2003

Sub: KVAT Act, 2003-Clarification under Section 59(4) regarding the rate of tax applicable on 'agricultural diesel pumpset and its spares and accessories'-reg.

Ref: Application Dated:09.08.2010 of Sri S.R. Rajkumaradhya, Partner of Arbel Company, No.2/2, M.P.M. Lane, S.J.P. Road Cross, Bangalore-560 002.

In the application cited above, Sri S.R.Rajkumaradhya, Partner of Arbel Company, Bangalore-560 002, has sought clarification regarding the rate of tax applicable on 'agricultural diesel pumpset and its spares and accessories'.

2. Section 59(4) of the Karnataka Value Added Tax Act, 2003 empowers the Commissioner of Commercial Taxes to clarify the rate of tax payable under the Act, if he considers it necessary or expedient so to do, for the purpose of maintaining uniformity in the work of assessments and collection of revenue. It is examined and found that the clarification requested by the petitioner is within the scope of the aforesaid provision and it is necessary that the clarification be issued for the purpose of maintaining uniformity in the work of assessments and collection of revenue.

3. Hence the following clarification is issued.

CLARIFICATION NO.CLR.CR.122/10-11, DATED:30.11.2010

It is clarified that 'centrifugal agricultural diesel pumpset and its parts' are liable to tax at 5% under entry 21 of the Third Schedule to the Karnataka Value Added Tax Act, 2003.

PRADEEP SINGH KHAROLA

PR-1727 Commissioner of Commercial Taxes,

(Karnataka), Bangalore.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ ಉಪವಿಭಾಗ-1

ಬೆಂದೂರ್‌ವೆಲ್, ಕಂಕನಾಡಿ, ಮಂಗಳೂರು-ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ/ಸಿಆರ್-39/10ಎಫ್, ದಿನಾಂಕ:29ನೇ ನವೆಂಬರ್, 2010

ಅರ್ಜಿದಾರರು:

1) Smt. Bhavani W/o Late Ramesh

2) Prashanthi D/o Late Ramesh,

Kannaje Bailu Lalla Village, Belthangady Taluk.D.K.

ವಿರುದ್ಧ

ಪ್ರತಿವಾದಿಗಳು:

1) Bhavanishankar S/o Late Raghava Gowda,

Puna House, Markanja Village, Sullia Taluk, D.K.

2) The Divisional Manager National Insurance Co.Ltd.,

Mangalore Division, Mangalore D.K.

ಅಧಿಸೂಚನೆ

ಅರ್ಜಿದಾರಳಾದ ಶ್ರೀಮತಿ ಭವಾನಿ W/o Late ರಮೇಶ್ ಇವರು ತಮ್ಮ ಮಗನಾದ ಶ್ರೀ ದಿವಂಗತ ಪ್ರಶಾಂತ್ ಇವರು 1ನೇ ಪ್ರತಿವಾದಿಗಳಾದ ಜೀಪ್ ವಾಹನ ಸಂಖ್ಯೆ: ಕೆಎ-19-ಎಂ-9498 ಮಹೀಂದ್ರ ಜೀಪ್‌ನಲ್ಲಿ ಚಾಲಕರಾಗಿದ್ದು, ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ:21.12.2008 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

ಆದ್ದರಿಂದ ಈ ವಿಷಯದಲ್ಲಿ ಈ ಅರ್ಜಿದಾರರಲ್ಲದೆ ಬೇರೆ ಯಾರಾದರೂ ಅರ್ಜಿದಾರರಾಗಿದ್ದು, ಅವರ ಅರ್ಜಿ ಅಥವಾ ತಕರಾರು ಏನಾದರೂ ಇದ್ದಲ್ಲಿ ಮತ್ತು ಈ ಅರ್ಜಿಗೆ ಸಂಬಂಧಿಸಿ ಇನ್ನಿತರ ಯಾವುದೇ ರೀತಿಯ ತಕರಾರು ಇದ್ದರೆ ಈ ಅಧಿಸೂಚನೆ ಸರ್ಕಾರಿ ರಾಜ್ಯಪತ್ರದಲ್ಲಿ ಪ್ರಕಟಣೆಯಾದಲ್ಲಿನಿಂದ 30 ದಿನಗಳೊಳಗೆ ಈ ನ್ಯಾಯಾಲಯಕ್ಕೆ ಸಲ್ಲಿಸಲು ಈ ಮೂಲಕ ತಿಳಿಸಲಾಗಿದೆ. ಈ ನಿಗದಿತ ಸಮಯದಲ್ಲಿ ಈ ನ್ಯಾಯಾಲಯವು ಯಾವ ಕ್ಲೈಮ್ ಅರ್ಜಿ/ ತಕರಾರು ಅರ್ಜಿ ಸ್ವೀಕರಿಸದಿದ್ದಲ್ಲಿ ಈ ನ್ಯಾಯಾಲಯವು ಮುಂದಿನ ಕ್ರಮವನ್ನು ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಡಿ.ಜಿ. ನಾಗೇಶ

ಪಿ.ಆರ್.1721

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ

ಆಯುಕ್ತರು, ದಕ್ಷಿಣ ಕನ್ನಡ ಉಪವಿಭಾಗ-1, ಮಂಗಳೂರು.

ಕಾರ್ಮಿಕ ಅಧಿಕಾರಿ ಹಾಗೂ ಕಾರ್ಮಿಕ ನಷ್ಟ ಪರಿಹಾರ ಆಯುಕ್ತರು, ದಕ್ಷಿಣ ಕನ್ನಡ ಉಪವಿಭಾಗ-1

ಬೆಂದೂರ್‌ವೆಲ್, ಕಂಕನಾಡಿ, ಮಂಗಳೂರು-ಇವರ ನ್ಯಾಯಾಲಯ

ಸಂಖ್ಯೆ: ಡಬ್ಲ್ಯೂಸಿಎ/ಸಿಆರ್-40/10, ದಿನಾಂಕ:3ನೇ ಡಿಸೆಂಬರ್, 2010

ಅರ್ಜಿದಾರರು:

1) ಶ್ರೀಮತಿ ಜಯಲತ Age 32, W/o Late ಯೋಗಿಶ

2) ಸಮರ್ಥ, ವರ್ಷ 2 S/o ದಿ. ಯೋಗಿಶ

3) ಶ್ರೀಮತಿ ಶಾರದ ವರ್ಷ-71, W/o Late ಬಾಬು ಉಳ್ಳಾಲ

ವಾಸ: 10-103/ಬಿ/7/ ಕೈಲಾಸನಗರ, ಸೋಮೇಶ್ವರ ವಿಲೇಜ್,

ಮಂಗಳೂರು.

ವಿರುದ್ಧ

ಪ್ರತಿವಾದಿಗಳು:

1) ಮೆ: Total Oil India Ltd.,

C.T.O.I. PL, Thokkurn Mangalore.

2) ಸಂತೋಷ ಚಾಕೊ Age 48 S/o K.C. Joseph,

Green Door, Nauthoor Janction Mangalore.

ಅಧಿಸೂಚನೆ

ಅರ್ಜಿದಾರಳಾದ ಶ್ರೀಮತಿ ಜಯಲತ W/o Late ಯೋಗಿಶ ಇವರು ತಮ್ಮ ಗಂಡನಾದ ಶ್ರೀ ಯೋಗಿಶ ಇವರು 1ನೇ ಪ್ರತಿವಾದಿಗಳಾದ M/s Total Oil India Ltd., C.T.O.I.PL, Thokkurn, ಇವರಲ್ಲಿ ಕ್ಲೀನಿಂಗ್ ಕೆಲಸಗಾರರಾಗಿದ್ದು ಕೆಲಸದಲ್ಲಿ ನಿರತರಾಗಿದ್ದಾಗ, ದಿನಾಂಕ:21.09.2010 ರಂದು ಅಪಘಾತಕ್ಕೀಡಾಗಿ ಮೃತರಾದರೆಂದು ಹೇಳಿ ಆಶ್ರಿತರಾದ ತಮಗೆ ಪ್ರತಿವಾದಿಯವರಿಂದ ಪರಿಹಾರವನ್ನು ಕೊಡಿಸಿ ಕೊಡಬೇಕೆಂದು ಈ ನ್ಯಾಯಾಲಯಕ್ಕೆ ಅರ್ಜಿಯನ್ನು ಸಲ್ಲಿಸಿರುತ್ತಾರೆ.

